ಅಧ್ಯಕ್ಷರು : ಶ್ರೀ ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದರು

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ನಾವು ಒಂದು ನಿಮಿಷಕ್ಕೆ 45-50 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಈ ಮನೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಆದರೆ ಮಾನ್ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಈ ಸದನದ ಸಮಯವನ್ನು ಅವರೇ ತೆಗೆದುಕೊಂಡು ಬೇರೆಯವರಿಗೆ ಅವಕಾಶ ಕೊಡದಂತೆ ಆಗಿದೆ. ನಾವೆಲ್ಲಾ ಹೊಸ ಸದಸ್ಯರು ಇಲ್ಲಿ ಬಂದಿದ್ದೇವೆ ನಮಗೂ ಆಸೆ ಇದೆ ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು, ನಮಗೂ ಅವಕಾಶ ಮಾಡಿ ಕೊಡಿ ಎಂದು ನಮ್ಮ ಮನವಿ. ಒಂದು ದಿನಕ್ಕೆ ನಾವು ಸುಮಾರು 1 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಾವು ರಾಜ್ಯದ ಜನರ ಇಷ್ಟೊಂದು ಹಣವನ್ನು ಖರ್ಚು ಮಾಡಿ, ನೀವು ಏನು ಕೆಲಸ ಮಾಡಿದಿರಿ ಅಂತಜನ ನಮ್ಮನ್ನು ಕೇಳಿದರೆ ನಾವು ಏನು ಕೆಲಸ ಮಾಡಿದಿರಿ ಅಂತಜನ ನಮ್ಮನ್ನು ಕೇಳಿದರೆ ನಾವು ಏನು ಉತ್ತರ ಹೇಳಬೇಕು? ಇದನ್ನು ತಾವು ದಯಮಾಡಿ ಯೋಚನೆ ಮಾಡಿ.

ಪ್ರಕಟಣೆ

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ ದಯಮಾಡಿ ಕುಳಿತುಕೊಳ್ಳಿ ನಾನು ಓದುತ್ತೇನೆ.

ಸರ್ಕಾರದವರು ಜನತಾ ಶಿಕ್ಷಣ ಎನ್ನುವ ಶೀರ್ಷಿಕೆ ಅಡಿಯಲ್ಲಿ ಒಂದು ವಿಡೀಯೋ ಚಿತ್ರೀಕರಣವನ್ನು ಮಾಡಿ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬಿಡುಗಡೆ ಮಾಡಲು ಉದ್ದೇಶಿಸಿದ್ದು, ಜನತಾ ಶಿಕ್ಷಣದ ಅಡಿಯಲ್ಲಿ ಮಾನ್ಯ ರಾಜ್ಯಪಾಲರು ಎರಡು ಸದನವನ್ನು ಉದ್ದೇಶಿಸಿ ಮಾಡಿದ ಭಾಷಣ, ವಂದನಾ ನಿರ್ಣಯದ ಮೇಲೆ ಸದಸ್ಯರು ಚರ್ಚೆ ಪ್ರಾರಂಭಿಸುವುದು ಹಾಗೂ ಅದನ್ನು ಅನುಮೋದಿಸುವುದು, ಸರ್ಕಾರದವರು ಉತ್ತರ ನೀಡುವುದು, ಅದೇ ರೀತಿ ಅರ್ಥ ಸಚಿವರು ವಿಧಾನ ಸಭೆಗೆ ಆಯವ್ಯಯವನ್ನು ಮಂಡಿಸುವುದು, ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಯನ್ನು ವಿರೋಧ ಪಕ್ಷದ ನಾಯಕರು ಪ್ರಾರಂಭಿಸುವುದು ಹಾಗೂ ಸಚಿವರು ಉತ್ತರವನ್ನು ನೀಡುವುದೆಲ್ಲವನ್ನೂ ಸದನದ ಒಳಗಡೆ ಚಿತ್ರೀಕರಿಸಲು ಸರ್ಕಾರದವರು ಆದೇಶ ಹೊರಡಿಸಿದ್ದಾರೆ. ಹಾಗೂ ಈ ಬಗ್ಗೆ ನನಗೆ ಒಂದು ಕಾಗದ ಬರೆದಿದ್ದು ಈ ಚಿತ್ರೀಕರಣ ಮಾಡಲು ಅನುಮತಿಸಿದ್ದೇನೆ.

ಆದಕಾರಣ, ಮಾನ್ಯ ಸದಸ್ಯರುಗಳೆಲ್ಲರೂ ಈ ಬಗ್ಗೆ ಸಹಕರಿಸಬೇಕೆಂದು ವಿನಂತಿಸುತ್ತೇನೆ.

(ಪ್ರಕಟಣೆಯನ್ನು ಲಗತ್ತಿಸಲಾಗಿದೆ)

ಹಕ್ಕುಚ್ಯುತಿ ನಿರ್ಣಯ(ಮುಂದುವರೆದದ್ದು)

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಇವತ್ತು ಬಹಳ ಸೂಕ್ಷ್ಮವಾದ ವಿಷಯವನ್ನು ಮಾನ್ಯ ಸದಸ್ಯರಾದ ನಾಗೇಗೌಡರು ತಂದಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಇದು ಹೆಸರಿಗೆ ಮಾತ್ರ ಶ್ರೀ ವಾಟಾಳ್ ನಾಗರಾಜ್‌ರವರು ನಿನ್ನೆಯ ದಿವಸ ಸದನದಲ್ಲಿ ನಡೆದಿರತಕ್ಕಂಥ ವಿಷಯದ ಬಗ್ಗೆ ಮಾನ್ಯ ನಾಗೇಗೌಡರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಬಹಳ ಸೂಕ್ಷ್ಮವಾದ ವಿಷಯ ಅಡಗಿದೆ ಅಂತ ನಾನು ಅಂದುಕೊಂಡಿದ್ದೇನೆ. ಮಾನ್ಯ ಸದಸ್ಯರು ಈ ಸದನದ

ಒಳಗಡೆ ಹೇಗೆ ನಡೆದುಕೊಳ್ಳಬೇಕು? ಅಥವಾ ಹೊರಗಡೆ ಹೇಗೆ ನಡೆದುಕೊಳ್ಳಬೇಕು? ಎರಡು ವಿಷಯಗಳ ಬಗ್ಗೆ ವಿಚಾರಣೆ ಆಗಬೇಕು ಎನ್ನುವುದು ನನ್ನ ಅಭಿಮತ ಏಕೆಂದರೆ ಈ ಸದನದ ಸದಸ್ಯರು ಇತರರಿಗೆ ಮಾಡಲ್ ಆಗಿರಬೇಕು. ಎಲ್ಲರಿಗೂ ಮಾಡಲ್ ಆಗಿ ನಡೆದುಕೊಳ್ಳಬೇಕೆನ್ನುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಯಾವುದಾದರೊಂದು ವಿಷಯವನ್ನು ಪ್ರಸ್ತಾಪನೆ ಮಾಡಿದಾಗ ಸದಸ್ಯರು ಸದನದ ಒಳಗಡೆ ಏನು ಮಾಡುತ್ತಾರೆ? ಯಾವ ರೀತಿ ವ್ಯವಹರಿಸುತ್ತಾರೆ? ಸದನದಲ್ಲಿ ಏನು ನಡೆಯುತ್ತಿದೆ ಎಂದು ಜನ ನೋಡುತ್ತಾರೆ ಅದಕ್ಕೋಸ್ಕರ ಪ್ರಿವಿಲೇಜ್ ಅಂತ ಹೇಳಿದರು. ನನ್ನ ಪ್ರಕಾರ ಸಭಾಧ್ಯಕ್ಷರೇ ಮಾನ್ಯ ಸದಸ್ಯರು ಈ ಸದನದ ಒಳಗಡೆ ಅಲ್ಲ,

ಯಾವುದೇ ಒಬ್ಬ ಸದಸ್ಯರು ಮಂತ್ರಿಗಳು ಆಗಲಿ ಅಥವಾ ವಿರೋಧಪಕ್ಷದ ಸದಸ್ಯರು ಆಗಲಿ ಸದನದ ಹೊರಗಡೆ ಹೇಗೆ ವ್ಯವಹರಿಸುತ್ತಾರೆ ಅದನ್ನು ಕೂಡ ಜನ ನೋಡುತ್ತಾರೆ. ಆದ್ದರಿಂದ ಸದಸ್ಯರ ಬಗ್ಗೆ ಅವರು ಏನಾದರೂ ಪ್ರಿವಿಲೇಜ್ ಮೋಷನ್ ಅಂತ ಹೇಳುವುದಾದರೆ ಇವೆಲ್ಲವನ್ನೂ ಸಹ ಕ್ರೋಢೀಕರಿಸಿ ನಾವು ವಿಚಾರ ಮಾಡಬೇಕಾಗುತ್ತದೆ ತೀರ್ಮಾನ ಮಾಡಬೇಕಾಗುತ್ತದೆ. ಅದನ್ನು ಮಾಡಬೇಕಾದರೆ ಪ್ರಿವಿಲೇಜ್ ಅಂದರೆ ಏನು? ಕೋಡ್ ಆಫ್ ಕಂಡಕ್ಟ್ ಅಂದರೆ ಏನು? ಸದನದ ಸದಸ್ಯರ ಕೋಡ್ ಆಫ್ ಕಾಂಡಾಕ್ಟ್ ಏನು ಎನ್ನುವುದನ್ನು ಇದರ ಬಗ್ಗೆ ಸ್ಪಷ್ಟೀಕರಣ ಸದಸ್ಯರಿಗೆ ಕೊಡಬೇಕಾಗುತ್ತದೆ. ಆ ಸ್ಪಷ್ಟೀಕರಣ ಇಲ್ಲದೇ ಇದ್ದಾಗ ಪ್ರಿವಿಲೇಜ್ ಎನ್ನುವುದೇ ಆಗುವುದಿಲ್ಲ. ರೈಟ್ಸ್ ಅಂಡ್ ಪ್ರಿವಿಲೇಜ್ಸ್ ಹಕ್ಕು ಅಥವಾ ಬಾಧ್ಯತೆ ಅಂತ ನೀವು ಏನಾದರೂ ಹೇಳುವುದಾದರೆ ನಿಮ್ಮ ಸದಸ್ಯರ ಹಕ್ಕುಗಳು ಏನು? ಆ ಬಾಧ್ಯತೆಗಳು ಏನು ಎನ್ನುವುದನ್ನು ನಮ್ಮ ರೂಲ್ಸ್‌ನಲ್ಲಿ ನಾವು ಎಲ್ಲೂ ಕೂಡ ಡಿಫೈನ್ ಮಾಡಿರುವುದಿಲ್ಲ. ಇವತ್ತು ಸನ್ಮಾನ್ಯ ಸದಸ್ಯರಾದ ನಾಗೇಗೌಡರು ಪ್ರಸ್ತಾವನೆ ಮಾಡಿದ್ದಾರೆ 27ನೇ ವಿಧಿಯ ಪ್ರಕಾರ ಇಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಸಭಾಧ್ಯಕ್ಷರೇ ಅವರು ಏನು ನಿರ್ಣಯ ಇಟ್ಟಿದ್ದಾರೆ ಆ ನಿರ್ಣಯವನ್ನು ಕೂಡ ಇವತ್ತಿನ ದಿವಸ ಸದಸ್ಯರಿಗೆ ಕೊಟ್ಟಿಲ್ಲ ಕೊಡಬೇಕೋ ಬೇಡವೋ ಅದುಬೇರೆ ವಿಷಯ. ಅದು ತಮಗೆ ಬಿಟ್ಟಿದ್ದುದು. ಆದರೆ ಅವರು ಏನು ನಿರ್ಣಯವನ್ನು ಮಂಡಿಸಿದ್ದಾರೆ ಆ ಮಂಡನೆ ಕೂಡ ನಮ್ಮ ಕಡೆಗೆ ಬಂದಿಲ್ಲ. ಅವರು ಏನು ನಿರ್ಣಯ ಇಟ್ಟಿದ್ದಾರೆ ಅದರ ಬಗ್ಗೆ ಸದನ ತೀರ್ಮಾನ ಮಾಡಬೇಕಾದರೆ ಸದನದಲ್ಲಿ ಅದು ಚರ್ಚೆ ಆಗಬೇಕಾದರೆ ಅಲ್ಲಿ ಏನು ನಿರ್ಣಯವನ್ನು ಮಂಡಿಸುತ್ತಿದ್ದಾರೆ. ಅದು ಸದಸ್ಯರಿಗೆ ಮೊದಲು ತಿಳಿಯಬೇಕಾದುದು ಅತಿ ಅವಶ್ಯಕ ಎಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ 'Observence of order during Governor's Address" ಅಂತ ಅದು ಬಿಟ್ಟು 27ನೇ ವಿಧಿ ಪ್ರಕಾರವಾಗಿ ಅವರು ನೋಟೀಸ್ ಕೊಟ್ಟಿದ್ದಾರೆ ಎನ್ನತಕ್ಕಂಥಾದ್ದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ತಮ್ಮ ಗಮನಕ್ಕೆ ತರುವುದು ಏನೆಂದರೆ ದಯವಿಟ್ಟು ತಾವು ಈ ವಿಧಿಯನ್ನು ನೋಡಬೇಕು. ಆ ವಿಧಿಯ ಪ್ರಕಾರ ಆ ಮೋಷನ್ ಈ ಸಭೆಯಲ್ಲಿ ಇಟ್ಟಂತೆ ಇಲ್ಲ. ದಯವಿಟ್ಟು ತಾವು ನೋಡಬೇಕು. "When the Houses of Legislature are assembled ~~together~~ under Article 175 or 176 or when the Members of the Assembly alone are assembled."

ಮಾನ್ಯ ಅಧ್ಯಕ್ಷರೇ ತಮ್ಮ ಗಮನವನ್ನು ಈ ಒಂದು ಅಕ್ಷರ ಏನು ಇದೆ ಕಡೆ ಗಮನ ಸೆಳೆಯುತ್ತೇನೆ. ಏಕೆಂದರೆ ಪ್ರತಿಯೊಂದು ಅಕ್ಷರಕ್ಕೂ ಒಂದು ಅರ್ಥ ಇದೆ. ಮಾನ್ಯ ಸದಸ್ಯರ ಹಕ್ಕುಬಾಧ್ಯತೆಗಳು ಅಥವಾ ಏನು ಪ್ರೊಸೀಜರ್ ನಡೆಯಬೇಕು ಅಂದಾಗ ಪ್ರತಿಯೊಂದು ಅಕ್ಷರಕ್ಕೂ ಕೂಡ ಬೆಲೆ ಇದೆ. ಅದರ ಪ್ರಕಾರ ಇದನ್ನು ನಿರ್ಮಾಣ ಮಾಡಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಅದನ್ನು ನೋಡಿದಾಗ

ದಯವಿಟ್ಟು ಈ ಅಕ್ಷರವನ್ನು ನೋಡಬೇಕು. 175-ಅಥವಾ 176ರಲ್ಲಿ "when the members of the Assembly alone are assembled under Article 175 of the Constitution, no member shall obstruct or interrupt."

ಮಾನ್ಯ ಸಭಾಧ್ಯಕ್ಷರೇ ನಿನ್ನೆಯದಿವಸ ತಮಗೆ ಗೊತ್ತಿದೆ Members alone were not assembled here. Other than the members ಈ ಸದನದ ಮತ್ತು ಮೇಲ್ಮನೆಯ ಸದಸ್ಯರು ಅಲ್ಲದವರು ಕೂಡ ಈ ಸದನದ ಒಳಗಡೆ ಇದ್ದರು ಎನ್ನುವುದನ್ನು ತಾವು ಪರಾಂಭರಿಸಿದ್ದೀರಿ. ಆದುದರಿಂದ 27ನೇ ವಿಧಿ ಅಪ್ಲೈ ಆಗುವುದಿಲ್ಲ, ಅವರು ಏನು ನಿರ್ಣಯವನ್ನು ತಮ್ಮ ಮುಂದೆ ತಂದಿದ್ದಾರೆ ಅಲೋನ್ ಎನ್ನತಕ್ಕಂಥಾದ್ದನ್ನು ನೋಡಿದಾಗ ಮಾನ್ಯ ಸದಸ್ಯರು ಮಾತ್ರ ಇಲ್ಲ ಬೇರೆಯವರು ಇದ್ದರು ಎಂದ ಮೇಲೆ ಈ 27 ನೇ ವಿಧಿ "Observance of order during Governor's Address".

ಬರುವುದೇ ಇಲ್ಲ, ಆದುದರಿಂದ ಅವರು ತಂದಿರತಕ್ಕಂಥ ನಿರ್ಣಯವನ್ನು prime facie it has no legs to stand. It has to be thrown out prima facie. ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು 27ನೇ ವಿಧಿ ಇಲ್ಲ ಎಂದು ಹೇಳುವುದಾದರೆ 191 ನೇ ವಿಧಿಯ ಪ್ರಕಾರ ತಂದಿದ್ದೇವೆ ಅಂತ ಹೇಳುವುದಾದರೆ ",.involing the breach of privelage of either a member of the House or a Committee thereof".

ಇಲ್ಲಿ ಅದೂ ಕೂಡ ಬರುವುದಿಲ್ಲ, ಏಕೆಂದರೆ 27ನೇ ವಿಧಿಯೇ ಬಾರದೇ ಇದ್ದಾಗ 191ನೇ ವಿಧಿ ಉದ್ಭವಿಸುವುದೇ ಇಲ್ಲ, ಆದುದರಿಂದ ಇದು ವಿಚಾರಣೆಗೆ ಬರತಕ್ಕಂಥ ವಿಷಯ ಅಲ್ಲ, ಇದರ ಬಗ್ಗೆ ಅನಗತ್ಯವಾಗಿ ವಿಚಾರಣೆ ಮಾಡತಕ್ಕಂಥಾದ್ದು ಶಷ್ಟೂ ಸೂಕ್ತ ಅಲ್ಲ ಎನ್ನುವುದು ನನ್ನ ಅಭಿಪ್ರಾಯ. ಅದರ ಬಗ್ಗೆ ತಾವು ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಮತ್ತೊಂದು ಗಹನವಾದ ವಿಷಯ ನಾನು ಮುಂದೆ ಹೇಳಬೇಕೆಂದು ಇರುವುದು ಏನೆಂದರೆ ಸದಸ್ಯರ ಫ್ರೀಡಂ ಆಫ್ ಸ್ಪೀಚ್ ಮೂಲಭೂತವಾದ ಹಕ್ಕು ರಾಜ್ಯಾಂಗದಲ್ಲಿ ಆರ್ಟಿಕಲ್ 19 ತಮಗೂ ಕೂಡ ಗೊತ್ತಿದೆ. ಇಲ್ಲಿರತಕ್ಕಂಥ ಎಲ್ಲಾ ಸದಸ್ಯರಿಗೂ ಗೊತ್ತಿದೆ. ಮೂಲಭೂತವಾದ ಹಕ್ಕು ಫ್ರೀಡಂ ಆಫ್ ಸ್ಪೀಚ್ ಅಂದಾಗ ಫ್ರೀಡಂ ಆಫ್ ಎಕ್ಸ್‌ಪ್ರೆಶನ್ ಕೂಡ ಬರುತ್ತದೆ. ಅಂದರೆ, ಸನ್ಮಾನ್ಯ ಸದಸ್ಯರು ಇಲ್ಲಿ ಯಾರ್ಯಾರು ಸದಸ್ಯರಾಗಿದ್ದಾರೆ ಅವರಿಗೆ ತಮ್ಮ ಅಭಿಮತವನ್ನು ವ್ಯಕ್ತಪಡಿಸಲು ಮಾತು ಮಾತ್ರ ಸಾಲದು ಅವರು ಯಾವುದೇ ವಿಧವಾಗಿ ಕೂಡ ಅಭಿವ್ಯಕ್ತ ಮಾಡಬಹುದು. ಇವತ್ತು ಸನ್ಮಾನ್ಯ ಸದಸ್ಯರು ಏನು ಮಾಡಿದ್ದಾರೆ ಎಂದು ಹೇಳಿದರೆ ಈ ರೀತಿ ಸದಸ್ಯರು ಯಾರಾದರೂ ತಪ್ಪು ದಾರಿಗೆ ಹೋದಾಗ ತಪ್ಪು ಮಾಡಿದಾಗ ಈ ರೀತಿ ಆಗತಕ್ಕಂಥಾದ್ದು ಸಹಜ. ಕೆಲವು ಮಕ್ಕಳು ಅಳುತ್ತದೆ ಕೆಲವು ಮಕ್ಕಳು ನಗುತ್ತವೆ. ಕೆಲವು ಮಕ್ಕಳು ಮಾತನಾಡಿ ಹೇಳುತ್ತವೆ ನೀವು ಮಾಡುವುದು ತಪ್ಪು ಅಂತ. ಅದೇ ರೀತಿ ಈ ಸದನದಲ್ಲಿ ರಾಜ್ಯಪಾಲರ ಎನ್ನುವುದು ರಾಜ್ಯಪಾಲರು ಏನಾದರೂ ಭಾಷಣ ಮಾಡುತ್ತಾರೆ ಅಂದಾಗ ರಾಜ್ಯಪಾಲರು ಗೌರ್ನಮೆಂಟ್‌ನ ಮೌತ್ ಫೀಡ್ ಆಗಿರುತ್ತಾರೆ. ಗೌರ್ನಮೆಂಟ್ ಮಾಡತಕ್ಕಂಥ ಪಾಲಿಸಿ ಬಗ್ಗೆ ಅವರು ಹೇಳುತ್ತಾರೆಯೇ ಹೊರತು ಅದು ರಾಜ್ಯಪಾಲರ ವೈಯುಕ್ತಿಕ ಅಭಿಪ್ರಾಯ ಎಂದೂ ಕೂಡ ಆಗಿರುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ತಿಳಿದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜದವರೂ ಕೂಡ ಈ ಸದನದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಗೌರ್ನಮೆಂಟ್ ಪಾಲಿಸಿ ಏನು ಇದೆ ಅದನ್ನು ಅಭಿವ್ಯಕ್ತ ಮಾಡತಕ್ಕಂಥ ಸಂದರ್ಭದಲ್ಲಿ ಹೇಳುವುದು ಒಂದು ಮಾಡುವುದು ಒಂದು ಬೇಡ ಇದು ಒಂದು ವಿಕ್ರಯವಾಗಬಾರದು ಇದೇ ರೀತಿ ಪ್ರತಿ ವರ್ಷ ನಡೆದುಕೊಂಡು

ಹೋಗುವುದು ಸರಿ ಇಲ್ಲ ಅಂತ ಅವರು ಅವರದೇ ಆದ ರೀತಿಯಲ್ಲಿ ಅಭಿವ್ಯಕ್ತ ಮಾಡಿದ್ದಾರೆ. ಅವರದ್ದೇ ಆದ ಧಾಟಿಯಲ್ಲಿ ಅವರದ್ದೇ ಆದ ವೈಶಿಷ್ಟ್ಯತೆಯಲ್ಲಿ ಹೇಳಿದ್ದಾರೆ.

MR. SPEAKER : By way of caution, you are a member of a national party. Your party is ruling four States and it is the official opposition party in four States.

ಅವರು ಒಬ್ಬ ಇಂಡಿಪೆಂಡೆಂಟ್ ಪಾರ್ಟಿ ಅವರದ್ದೇ ಆದ ಒಂದು ಪಾರ್ಟಿ ಇದೆ. ನೀವು ಇದನ್ನು ಸಬ್‌ಸ್ಟಾನ್ಷಿಯೇಟ್ ಮಾಡತಕ್ಕಂಥ ರೀತಿಯಲ್ಲಿ ಮಾತನಾಡಿದರೆ ನೋಡಿ ಎಲ್ಲೆಲ್ಲಿ ಏನೇನು ಪರಿಣಾಮ ಆಗುತ್ತದೆಂದು ಯೋಚನೆ ಮಾಡಿ. This is only by way of caution.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ I am speaking about principles. ನಾನು ಹೇಳತಕ್ಕಂಥಾದ್ದು ಪ್ರಿನ್ಸಿಪಲ್. ಪ್ರಿನ್ಸಿಪಲ್ ಏನಿದೆ ಎನ್ನತಕ್ಕಂಥಾದ್ದನ್ನು ನಾನು ಹೇಳುತ್ತಿದ್ದೇನೆ. Freedom of speech and freedom of expression.

ಅಭಿವ್ಯಕ್ತ ಮಾಡತಕ್ಕಂಥ ಸಂದರ್ಭದಲ್ಲಿ ಕೆಲವರು ಮಾತನಾಡುತ್ತಾ ಹೇಳಬಹುದು ಕೆಲವರು ಅಳುತ್ತಾ ಹೇಳಬಹುದು. ಕೆಲವರು ನಗುತ್ತಾ ಹೇಳಬಹುದು ಕೆಲವರು ಬೇರೆ ರೀತಿಯಲ್ಲಿ ಅಭಿವ್ಯಕ್ತ ಮಾಡಬಹುದು. ಆದುದರಿಂದ ಫ್ರೀಡಂ ಆಫ್ ಎಕ್ಸ್‌ಪ್ರೆಶನ್‌ಗೆ ಯಾರೂ ಅಡ್ಡಿ ಪಡಿಸತಕ್ಕಂಥಾದ್ದು ಸರಿ ಅಲ್ಲ. There must be reasonable restrictions.

ಅದು ಆರ್ಟಿಕಲ್ 19ರಲ್ಲಿ ಮೂಲಭೂತಹಕ್ಕಿನಲ್ಲಿ ರಿಸ್ಟ್ರಿಕ್ಷನ್ ಇರಬೇಕಾದರೆ ಆರ್ಟಿಕಲ್ 19(2)ನಲ್ಲಿ ಯಾವ ರೀತಿತರಬಹುದು ಎನ್ನುವುದನ್ನು ರಾಜ್ಯಾಂಗದಲ್ಲಿ ಈಗಾಗಲೇ ವಿಧಿವತ್ತಾಗಿ ಹೇಳಿದೆ. ಆ ರೀತಿಯ ಕಾನೂನು ಆರ್ಟಿಕಲ್ 19(2) ನಲ್ಲಿ ಇದುವರೆಗೂ ಕೂಡ ಈ ಸದನದಲ್ಲಿ ಈ ರೀತಿ ಇರಬೇಕು ಎಂದು ಆರ್ಟಿಕಲ್ 19(2)ನಲ್ಲಿ ಇದುವರೆಗೂ ಯಾವುದೇ ಒಂದು ಕಾನೂನು ತಂದಿಲ್ಲ, ತರದೇ ಇರತಕ್ಕಂಥ ಸಂದರ್ಭದಲ್ಲಿ ಈ ಒಂದು ಸದನದಲ್ಲಿ ಮಾತನಾಡತಕ್ಕಂಥ ಹಕ್ಕು, ಅಭಿವ್ಯಕ್ತಮಾಡತಕ್ಕಂಥ ಹಕ್ಕು, ಯಾವ ರೀತಿ ಮಾತನಾಡಬೇಕು ಎನ್ನುವಂತಹ ಹಕ್ಕು, ತಮ್ಮ ಕೋಪವನ್ನು ತಮ್ಮ ತಾಪವನ್ನು ಯಾವ ರೀತಿ ಹೇಳಬೇಕು ಎನ್ನತಕ್ಕಂಥ ಹಕ್ಕು ಸದಸ್ಯರಿಗೆ ಇದೆ ಎಂದು ನಾನು ಅಂದುಕೊಂಡಿದ್ದೇನೆ. ಆ ಒಂದು ಹಕ್ಕನ್ನು ಅವರು ಚಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ 27ನೇ ವಿಧಿಯ ಪ್ರಕಾರ ಯಾವುದೇ ವಿಧರಾದ I insist 'when the members are alone' ಇದ್ದಾಗ ಮಾತ್ರ ಅಬ್ ಸ್ಟ್ರಕ್ಷನ್ ಆಗುತ್ತದೆಯೇ ಹೊರತು ಬೇರೆ ಸಂದರ್ಭದಲ್ಲಿ ಪ್ರಿವಿಲೇಜ್ ಮೋಷನ್ ಬರುವುದೇ ಇಲ್ಲ. ಆದುದರಿಂದ ಈ ಒಂದು ನಿರ್ಣಯವನ್ನು ಅವರು ಏನು ತಂದಿದ್ದಾರೆ. ಅಷ್ಟೇ ಅಲ್ಲ ನಮ್ಮ ಎದುರಿಗೆ ಕಂಡಂತಹ ದೃಶ್ಯ.. ತಮಗೆ ಗೊತ್ತಿದೆ ಪ್ರಿನ್ಸಿಪಲ್ things speak for itself.

ಎನ್ನತಕ್ಕಂಥಾದ್ದು ಎಲ್ಲಾ ಸದಸ್ಯರು ನೋಡಿದ್ದಾರೆ, ಪ್ರತಿಯೊಬ್ಬ ಸದಸ್ಯರೂ ಕೂಡ ನೋಡಿದ್ದಾರೆ. ಸನ್ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಪ್ರತಿಯನ್ನು ಕಾಲಿನಲ್ಲಿ ತುಳಿದಿದ್ದು ಇಲ್ಲ, ಆ ವ್ಯವಹಾರ ಏನೂ ಇಲ್ಲಿ ಆಗಿಲ್ಲ. It is a false satement made by an Hon'ble Member.

ಆದ್ದರಿಂದ ದಯವಿಟ್ಟು ಪ್ರಿವಿಲೇಜ್ ತೆಗೆದುಕೊಳ್ಳುವುದಾದರೆ I request the Hon'ble Speaker to take cognisance against the Member who has proposed

this resolution and take for privilege and not against the other member. Please drop the privilege motion.

MR. SPEAKER : All of you have been mentioning about it. ಯಾರೂ ರೈಟಿಂಗ್ ನಲ್ಲಿ ಕೊಟ್ಟೇ ಇಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು ಸದನ ನಡೆಸುವುದಕ್ಕೆ ಒಂದು ನಿಮಿಷಕ್ಕೆ 50 ಸಾವಿರ ರೂಪಾಯಿಗಳು ಖರ್ಚಾಗುತ್ತಿದೆ. ಆದರೆ ಬೇಡದೇ ಇರುವ ಒಂದು ವಿಚಾರ ಎಷ್ಟಕ್ಕೆ ಲಿಮಿಟ್ ಮಾಡಬೇಕಾಗಿತ್ತೋ ಅಷ್ಟಕ್ಕೆ ಮಾಡಬಹುದಾಗಿತ್ತು. ಆದರೆ ಈ ವಿಷಯವನ್ನು ಇಡೀ ಸದನ ಚರ್ಚೆ ಮಾಡುತ್ತಿದೆ. ಈ ರೀತಿ ಆದರೆ ಹೊಸ ಸದಸ್ಯರು ನಾವು ಏನು ಮಾಡಬೇಕು ಇದಕ್ಕೆ ಎಲ್ಲಿಯಾದರೂ ಒಂದು ಕಡೆ ಲಿಮಿಟ್ ಮಾಡಿ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಯಾರು ನಿಮಿಷಕ್ಕೆ 50ಸಾವಿರ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದರೋ ಅವರ ಪರವಾಗಿರುವುದೇ ತಂದಿದ್ದಾರೆ. ಕಷ್ಟ ಬಂದಿದ್ದು ಇಲ್ಲಿ, ಈ ಕಡೆಯ ಯಾರಾದರೂ ಸದಸ್ಯರು ತಂದಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ಆದರೆ ನಿಮಿಷಕ್ಕೆ 60ಸಾವಿರ ರೂಪಾಯಿ ಖರ್ಚಾಗುತ್ತದೆಂದು ಹೇಳಿಕೊಳ್ಳುವವರೇ ಅವರ ಪರವಾಗಿ ಅವರ ಪಕ್ಷದವರೇ ಇವತ್ತು ತಂದಿದ್ದಾರೆ. ತಮಗೂ ಗೊತ್ತಿದೆ ಈ ಸದನದಲ್ಲಿ ಅನೇಕ ಸಲ ಈ ರೀತಿ ನಡೆದಿದೆ. ಸುಮಾರು 2-3 ಗಂಟೆಗಳಿಂದ ನಾವು ಸದನದಲ್ಲಿ ಇದನ್ನು ಚರ್ಚೆ ಮಾಡುತ್ತಿದ್ದೇವೆ. ಅನೇಕ ಮಹತ್ವದ ವಿಷಯಗಳು ಇವೆ. ಆದ್ದರಿಂದ ತಾವು ಒಂದು ನಿರ್ಣಯಕ್ಕೆ ಬನ್ನಿ.

ಅಧ್ಯಕ್ಷರು : ಈಗ ಒಂದು ನಿಮಿಷಕ್ಕೆ ಆಗುವ ವೆಚ್ಚ ಸುಮಾರು 60 ಸಾವಿರ ಎಂದು ಹೇಳಿದ್ದಾರೆ. ತಾವು ದುಬಾರಿ ಸದಸ್ಯರಾಗುವಂತೆ ಸರಳವಾದ ಸದಸ್ಯರಾಗಬೇಕು, ಸಮಾಜವಾದಿ ಸದಸ್ಯರಾಗಬೇಕು.

+ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ರೀತಿಯಾಗಿ ನೀವು ಶೆಟ್ಟರ ತರಹ ಲೆಕ್ಕ ಹಾಕಿದ್ದಿದ್ದರೆ 1956ರಿಂದ ಏನು ಈ ಪದ್ಧತಿ ಶುರುವಾಗಿದೆ ಅಲ್ಲಿಂದ ಇಲ್ಲಿಯವರೆಗೆ ಎಷ್ಟೋ ಕೋಟಿ ಕೋಟಿ ರೂಪಾಯಿಗಳು ಉಳಿಯುತ್ತಾ ಇರುತ್ತಿತ್ತು. ಹಾಗೆ ನಮ್ಮಲ್ಲಿ ಹಣ ಉಳಿಸಿಕೊಂಡು ಬಂದಿದ್ದರೆ ನಮ್ಮ ಖಜಾನೆ ತುಂಬಿರುತ್ತಾ ಇತ್ತು. ಬೇರೆಯವರ ಹತ್ತಿರ ನಾವು ವಸೂಲಿ ಮಾಡಬೇಕಾಗಿ ಇರುತ್ತಿರಲಿಲ್ಲ. ಇಂಥ ಚರ್ಚೆಗಳು ಹೊಸದೇನಲ್ಲ. ಇಂಥ ಚರ್ಚೆಗಳ ಕಾಲಾವಧಿಯ ಬಗ್ಗೆ ನೀವು ಹಣಕಾಸಿನ ಲೆಕ್ಕ ಹಾಕಿಕೊಂಡು ಉಳಿಸಿಕೊಂಡು ಬೇರೆಯವರ ಹತ್ತಿರ ನಾವು ವಸೂಲಿ ಮಾಡಬೇಕಾಗಿ ಇರುತ್ತಿರಲಿಲ್ಲ. ಇಂಥ ಚರ್ಚೆಗಳು ಹೊಸದೇನಲ್ಲ. ಇಂಥ ಚರ್ಚೆಗಳ ಕಾಲಾವಧಿಯ ಬಗ್ಗೆ ನೀವು ಹಣಕಾಸಿನ ಲೆಕ್ಕ ಹಾಕಿಕೊಂಡು ಉಳಿಸಿಕೊಂಡು ಬರುವ ಪದ್ಧತಿಯು ಇದ್ದಿದ್ದರೆ ತುಂಬಾ ಹಣ ಉಳಿಯುತ್ತಾ ಇತ್ತು. ತಾವು ಕೂಡ ಈ ಸದನದಲ್ಲಿ ಇಂಥ ಚರ್ಚೆಗಳು ನಡೆಯುತ್ತಿದ್ದುದನ್ನು ನೋಡಿದ್ದೀರಿ. ಮಾನ್ಯ ಅಧ್ಯಕ್ಷರೇ, ನಾನೇನೂ ಹೊಸದಾಗಿ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡುತ್ತಾ ಇಲ್ಲ. ಹಾಗೆಯೇ ಈ ಭಾಷಣವನ್ನು ಮಾಡುವಾಗಲೇ ನಾನು ಪರಿಣಾಮಕಾರಿಯಾಗಿ ವೈಯಕ್ತಿಕವಾಗಿ ರಾಜ್ಯಪಾಲರ ಮೇಲೆ ಯಾವುದೇ ವಿಧವಾದಂಥ ನನ್ನ ಆರೋಪಣೆಯಲ್ಲ ಎನ್ನುವ ಮಾತನ್ನು ಹೇಳಿ, ಅವರ ಬಗ್ಗೆ ನನಗೆ ಅಪಾರ ಗೌರವವಿದೆ ಎಂದು ಹೇಳತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಈ ನಿರ್ಣಯವನ್ನು ಶ್ರೀಮಾನ್ ನಾಗೇಗೌಡರು ತಂದಿದ್ದಾರೆ. ಇದು ಬಹಳ ಧರ್ಮ ಸಂಕಟದ ವಿಚಾರವಾಗಿದೆ. ಬಹುಶಃ ಅವರಿಗೆ ಈ ನಿರ್ಣಯವನ್ನು ನನ್ನ ವಿರುದ್ಧ ತರಬೇಕೆಂದು ಆತ್ಮಸಾಕ್ಷಿ

ಇತ್ತೋ ಅಥವಾ ಯಾರದೋ ಒತ್ತಡದಿಂದ ಹೀಗೆ ಮಾಡಿದ್ದಾರೋ ಎಂಬುದು ತಿಳಿದಿಲ್ಲ, ಅಂಥ ಒತ್ತಡವನ್ನು ಯಾರಾದರೂ ತಂದಿದ್ದಾರೋ..?

ಶ್ರೀ ಕೆ.ಎನ್. ನಾಗೇಗೌಡ : ನಾವು ಇಲ್ಲಿ ಒತ್ತಡದ ಮೇಲೆ ಕೆಲಸ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ಸರಕಾರದಲ್ಲಿ ನಡೆಯುತ್ತಿರುವುದು, ಅದು ಹೀಗೆ ಇರಬೇಕು, ಇದು ಹಾಗೇ ಇರಬೇಕು, ನಾಳೆ ಈ ರೀತಿಯಾಗಿ ಚರ್ಚೆ ನಡೆಯಬೇಕು ಎಂಬುದೆಲ್ಲಾ ಒಂದು ರೀತಿಯಲ್ಲಿ ಒತ್ತಡದ ಮೇಲೆಯೇ, ಒತ್ತಡ ಇಲ್ಲದೆ ಯಾವುದೂ ನಡೆಯುವುದಿಲ್ಲ, ಅದನ್ನು ತಿಳಿದುಕೊಂಡು ನಡೆಯಬೇಕಾಗಿದೆ. ಆದ್ದರಿಂದ ಈ ಒತ್ತಡದ ಮೇಲೆ ಅವರು ಈ ನಿರ್ಣಯವನ್ನು ತಂದಿದ್ದಾರೆ ಎನ್ನತಕ್ಕಂಥಾದ್ದು ನನ್ನ ಮನಸ್ಸಿನಲ್ಲಿ ಬಂದಿದೆ. ನಿಮ್ಮ ಕುರಿತಾಗಿ ಯಾವ ಆರೋಪಣೆಯೂ ಇಲ್ಲ. ಒಮ್ಮೆ ನಾಗೇಗೌಡರು ಹಲಗೂರಿನಲ್ಲಿ ಕಾಂಗ್ರೆಸ್ ನಲ್ಲಿದ್ದಾಗ ಭಾಷಣ ಮಾಡುತ್ತಾ ಒಂದು ಮಾತನ್ನು ಹೇಳಿದರು. ಆ ಸಮಾರಂಭದಲ್ಲಿ ನಾನಿದ್ದೆ. "ಕಾಂಗ್ರೆಸ್ ಪಕ್ಷದ ಒಬ್ಬ ಸದಸ್ಯರು ನಷ್ಟವಾದರೂ ಚಿಂತೆ ಇಲ್ಲ, ಆದರೆ ವಾಟಾಳ್ ನಾಗರಾಜ್‌ರಂಥವರು ಶಾಸನ ಸಭೆಗೆ ಬರಬೇಕು"- ಎಂದು ಹೇಳಿದ್ದರು. ಆದರೆ ಇವೊತ್ತು ಅವರು ತಂದಿರುವ ನಿರ್ಣಯವನ್ನು ನೋಡಿದಾಗ, ಅದು ಅವರ ಆತ್ಮಸಾಕ್ಷಿಗೆ ವಿರುದ್ಧವಾಗಿ ಇದೆ. ಅವರ ಜೊತೆಯಲ್ಲಿ ಇನ್ನಿಬ್ಬರು ನಮ್ಮ ಸ್ನೇಹಿತರನ್ನು ಕೂಡ ಸೇರಿಸಿದ್ದಾರೆ. ಇಲ್ಲಿ ಮೂಲಭೂತವಾಗಿ ತಮಗೆ ನಾನು ಹೇಳತಕ್ಕಂಥಾದ್ದು, ಮೊದಲನೆಯದಾಗಿ ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಹರಿದು ಹಾಕಿದ್ದುದು ನಿಜ. ಅದರಲ್ಲಿ ಏನೂ ಹಿಂದೆ ಮುಂದೆ ಮಾತನಾಡುವುದಿಲ್ಲ, ಹಾಗೆಯೇ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ ಪರ್ಯಾಯ ಭಾಷಣ ಮಾಡಿದ್ದುದು ನಿಜ. ಅದನ್ನು ಮಾಡಿಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ರಾಜ್ಯಪಾಲರ ಭಾಷಣವನ್ನು ನಾನು ತುಳಿದಿದ್ದೇನೆ ಎಂಬ ಪದವನ್ನು ಏನು ಇಲ್ಲಿ ಬಳಸಿದ್ದಾರೆ, ಇದರಿಂದ ನನ್ನ ಮನಸ್ಸಿಗೆ ನೋವು ಆಗಿದೆ. ನಾನು ತುಳಿದಿದ್ದರೆ ತುಳಿದಿದ್ದೆ ಎಂದು ನಾನು ಹೇಳುತ್ತಾ ಇದ್ದೆ. ನಾನು ಯಾರ ಕೃಪೆಗೂ ಅಂಜಿಕೊಂಡು ಹೆದರಿಕೊಂಡು ನಡೆಯುವವನು ನಾನಲ್ಲ, ನಾನು ತುಳಿದಿಲ್ಲ, ಆ ಕ್ರಿಯೆಯು ನಡೆದಿಲ್ಲ, ನಾನು ಅದನ್ನು ಹರಿದು ಹಾಕಿದ್ದೆ, ಪ್ರತಿಭಟನೆ ಮಾಡಿದ್ದೆ, ಪರ್ಯಾಯ ಭಾಷಣವನ್ನು ಮಾಡಿದ್ದೆ, ಕಪ್ಪು ಬಾವುಟವನ್ನು ಪ್ರದರ್ಶನ ಮಾಡಿದ್ದೆ, ಇದು ನಿಜ. ಈ ಪರಿಸ್ಥಿತಿಯಲ್ಲಿ ತುಳಿದರು ಅಂದರೆ ಈ ಕೇಸು ಭದ್ರವಾಗಲಿ ಎಂದು ಆ ಪದವನ್ನು ಸೇರಿಸಿರಬೇಕು. ನಮ್ಮ ಹಳ್ಳಿಗಳ ಕಡೆಯಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳು ಯಾವುದಾದರೂ ಒಂದು ಕೇಸು ಭದ್ರವಾಗಬೇಕಾದರೆ ಯಾವ ಯಾವ ಕಾಲಮ್‌ಗಳನ್ನು, ಯಾವ ಯಾವ ಶಬ್ದಗಳನ್ನು ಸೇರಿಸಬೇಕೋ ಅದನ್ನು ಸೇರಿಸಿ ಕೇಸ್‌ನ್ನು ಭದ್ರವಾಗಿ ಮಾಡುತ್ತಾರೆ. ಹಾಗೆ ಸೇರಿಸಿ ಭದ್ರಮಾಡದಿದ್ದರೆ ಅದು ಕೋರ್ಟ್‌ನಲ್ಲಿ ನಿಲ್ಲುವುದಿಲ್ಲವೆಂದು ಸೇರಿಸುತ್ತಾರೆ. ಐಪಿಸಿ ಸೆಕ್ಷನ್‌ಗಳು ಅವು. ಇಂಥ ಅನುಭವವು ನನಗೆ ಸುಮಾರು 35 ವರ್ಷಗಳಿಂದಲೂ ಇದೆ. ಸುಮಾರು 2-3 ಸಾವಿರ ಕೇಸ್‌ಗಳನ್ನು ಹೀಗೆ ಹಾಕಿರಬಹುದು. ಭದ್ರವಾಗಬೇಕಾದರೆ ಪುಸ್ತಕದಲ್ಲಿನ ಯಾವ್ಯಾವುದೋ ಸೆಕ್ಷನ್‌ಗಳನ್ನು ಸೇರಿಸಿ ಬಿಡುತ್ತಾರೆ. ಅದೇ ರೀತಿಯಲ್ಲಿ ಇವರು ನಿರ್ಣಯವನ್ನು ತರುವಾಗ ವಾಟಾಳ್ ನಾಗರಾಜ್‌ರವರು ರಾಜ್ಯಪಾಲರ ಭಾಷಣವನ್ನು ತುಳಿದರು ಎಂದು ಹೇಳುವುದರ ಮೂಲಕ ಸಾರ್ವಜನಿಕರಲ್ಲಿ ವಾಟಾಳ್ ನಾಗರಾಜ್‌ರ ಬಗ್ಗೆ ಒಂದು ಕೆಟ್ಟ ಅಭಿಪ್ರಾಯ ಮಾಡುವ ಹಾಗೆ ಮಾಡುವುದು ನಿಮ್ಮ ಚಿಂತನೆ ಇರಬಹುದು ಎಂದು ನನ್ನ ಅನಿಸಿಕೆ. ನಿನ್ನೆ ನಡೆದ ಘಟನೆಯನ್ನು ಇಡೀ ಸದನವೇ ಕಂಡಿದೆ. ಈ ಕಡೆಯಲ್ಲಿ ಪತ್ರಕರ್ತರ ಗ್ಯಾಲರಿ ಇದೆ, ಆ ಕಡೆಯಲ್ಲಿ ಅಧಿಕಾರಿಗಳ ಗ್ಯಾಲರಿ, ಅವರೆಲ್ಲರಿಗಿಂತಲೂ ಹೆಚ್ಚಾಗಿ ಪರಮಪವಿತ್ರವಾದಂಥ ತಮ್ಮ ಸ್ಥಾನ ಇದೆ. ತಾವು ಇರುವ ಸ್ಥಾನಕ್ಕೂ, ನನಗೂ ಹೆಚ್ಚೇನೂ ದೂರವಿಲ್ಲ, ನಾವು, ನೀವು

ಹತ್ತಿರದಲ್ಲಿಯೇ ಇದ್ದೇವೆ. ರಾಜ್ಯಪಾಲರನ್ನು ಕೂಡ ತಾವು ಸಬೆ ಮುಗಿದ ನಂತರ ನಿಮ್ಮ ಭಾಷಣವನ್ನು ವಾಟಾಳ್ ನಾಗರಾಜ್‌ರು ತುಳಿದಿರುವುದನ್ನು ನೋಡಿದ್ದೀರಾ? ಎಂದು ಕೇಳಿದರೂ ಕೂಡ ಅವರು ಏನೂ ಹೇಳಲಾರರು. ಯಾಕೆಂದರೆ ಅಂಥಾದ್ದು ಏನೂ ನಡೆದಿಲ್ಲ, ಇಲ್ಲಿ ಸೇವೆ ಇದನ್ನು ಸೃಷ್ಟಿ ಮಾಡಿದ್ದೀರ ನಿಮ್ಮ ಅಂತರಾಳವನ್ನು ನೀವೇ ಪ್ರಶ್ನಿಸಿ ಈ ಬಗ್ಗೆ ನನಗೆ ಹೇಳಿ.

ನಮ್ಮ ಹಳ್ಳಿಗಳಲ್ಲಿನ ಜನರಲ್ಲಿ ಹೆಚ್ಚಾಗಿ ಅಂತರಾಳದ ಮಾತುಗಳನ್ನು ಆಡುವುದು ಇದೆ. ಆಗ ಹೇಳುತ್ತಾರೆ, ನ್ಯಾಯಾಲಯಕ್ಕೆ ಹೋಗುವುದಕ್ಕಿಂತ ಮುಂಚೆ ನೋಡಿಕೋ, ನಿನ್ನ ಎದೆ ಮುಟ್ಟಿನೋಡಿಕೋ ದೇವರು ನಿನ್ನನ್ನು ನೋಡುತ್ತಿರುತ್ತಾನೆ, ಅನ್ಯಾಯ ಮಾಡಬೇಡ ಎಂಬಿತ್ಯಾದಿಯಾಗಿ ಹೇಳುತ್ತಾರೆ. ಇವೊತ್ತು ಈ ನಿರ್ಣಯವನ್ನು ತಂದವರು ಕೂಡ ನನ್ನ ಸ್ನೇಹಿತರೇ. ಅವರ ಬಗ್ಗೆ ನಾನು ಅಪಾರ ಗೌರವವನ್ನು ಇಟ್ಟುಕೊಂಡವನು. ನಾನು ಅವರನ್ನು ವಿರೋಧ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ, ಆದರೆ ಅವರು ನಿರ್ಣಯದಲ್ಲಿ ರಾಜ್ಯಪಾಲರ ಭಾಷಣವನ್ನು ತುಳಿದರು ಎನ್ನುವ ಪದವನ್ನು ಸೇರಿಸುವಾಗ ಅವರು ದಾರಿ ತಪ್ಪಿದ್ದಾರೆ ಎಂದು ಅನ್ನಿಸುತ್ತದೆ. ಅದನ್ನು ಬಿಟ್ಟು ಮತ್ತೆಲ್ಲಾ ವಿಷಯಗಳು ನಿಜ. ಮಾನ್ಯ ಅಧ್ಯಕ್ಷರೇ, ಮಿಕ್ಕ ಎಲ್ಲಾ ವಿಷಯಗಳು ಎನ್ನುವುದನ್ನು ನಾನು ನಿನ್ನೆಯೂ ಹೇಳಿದ್ದೇನೆ, ಇವೊತ್ತೂ ಹೇಳುತ್ತೇನೆ. ಹೀಗೆ ಬಹಿರಂಗವಾಗಿ ನಾನು ವಿಚಾರವನ್ನು ಹೇಳಿದ್ದೇನೆ. ಆ ಬಗ್ಗೆ ತಮಗೆ ಸಂಪೂರ್ಣವಾದಂಥ, ಎಲ್ಲಾ ವಿಧವಾದಂಥ ಅಧಿಕಾರ ಇದೆ. ತಾವುಗಳು ನಿಯಮಾವಳಿಗಳ ಪ್ರಕಾರ ಯಾವುದೇ ಕ್ರಮವನ್ನೂ ನನ್ನ ಮೇಲೆ ತೆಗೆದುಕೊಂಡರೂ ಅದನ್ನು ನಾನು ಶಿರಸಾವಹಿಸಿ ಪಾಲಿಸುತ್ತೇನೆ. ನಿಮ್ಮ ಬಗ್ಗೆ ನನಗೆ ಲವಲೇಶದಷ್ಟೂ ಅಗೌರವ ಇರುವುದಕ್ಕೆ ಸಾಧ್ಯವಿಲ್ಲ, ನಾನು ತಮ್ಮ ಮೇಲೆ ಅಪಾರವಾದ ಗೌರವಾದರಗಳನ್ನು ಇಟ್ಟುಕೊಂಡಿರುವವನು. ನಾನು ಬೆಳಿಗ್ಗೆಯೂ ತಮ್ಮ ಕಾರ್ಯಾಲಯಕ್ಕೆ ಬಂದಿದ್ದೆನು. ತಾವುಗಳು ಒಂದು ರೀತಿಯ ಇಕ್ಕಟ್ಟಿನಲ್ಲಿ ಇದ್ದಂತೆ ಭಾಸವಾಯಿತು. ತಾವು ಹಿರಿಯ ಸದಸ್ಯರು. ಈ ಕಡೆಯಿಂದ ಒಂದು ನಿರ್ಣಯ ಬಂದಿದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದಂತೆ ಆಯಿತು. ಆದರೆ ಹಾಗೇ ಏನೂ ಇಲ್ಲ, ತಾವು ಏನು ತೀರ್ಮಾನವನ್ನು ಕೊಡುತ್ತೀರೋ ಅದಕ್ಕೆ ನಾನು ಭಾದ್ಯನಾಗಿದ್ದೇನೆ.

ತಮ್ಮ ತೀರ್ಮಾನವನ್ನು ಶಿರಸಾವಹಿಸಿ ಪಾಲಿಸುತ್ತೇನೆ. ಅದರ ಬಗ್ಗೆ ನನ್ನ ಯಾವುದೇ ಬೇರೆ ಮಾತಿಲ್ಲ, ನಿರ್ಣಯದಲ್ಲಿ ರಾಜ್ಯಪಾಲರ ಭಾಷಣವನ್ನು ನಾನು ತುಳಿದಿದ್ದೇನೆ ಎಂದು ಹೇಳಿದ್ದಾರೆ. ಶ್ರೀಮಾನ್ ನಾಗೇಗೌಡರು, ಶ್ರೀ ವಿ. ಸೋಮಣ್ಣ, ಶ್ರೀ ಶಿವಕುಮಾರ್ - ಇವರುಗಳ ವಿರುದ್ಧ ಒಂದು ಹಕ್ಕುಚ್ಯುತಿ ನಿರ್ಣಯವನ್ನು ನಾನು ತಮಗೆ ಸಲ್ಲಿಸಿದ್ದೇನೆ. ನನ್ನ ಮೇಲೆ ಇಲ್ಲಸಲ್ಲದ ಆಪಾದನೆಗಳನ್ನು ಮಾಡಿ, ಸತ್ಯಕ್ಕೆ ದೂರವಾದಂಥ ಸುಳ್ಳನ್ನು ಹೇಳಿ, ನನ್ನ ಮನಸ್ಸಿಗೆ ನೋವನ್ನು ಉಂಟು ಮಾಡಿ, ಇಂಥ ನಿರ್ಣಯವನ್ನು ಕೊಟ್ಟಿದ್ದರಿಂದ ನಾನೂ ಕೂಡ ಸತ್ಯಸ್ಥಿತಿಯನ್ನು ತಮಗೆ ತಿಳಿಸಬೇಕಾಗುತ್ತದೆ. ಅದನ್ನು ಮಾಡಿದ್ದೇನೆ. ಆ ಬಗ್ಗೆ ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕು. ನನ್ನ ಮನವಿಯನ್ನು ತಾವು ಪರಾಂಬರಿಸಬೇಕು. ಆದ್ದರಿಂದ ತಾವು ದಯಮಾಡಿ ಆ ಎರಡೂ ಹಕ್ಕುಚ್ಯುತಿ ನಿರ್ಣಯಗಳನ್ನು ಒಟ್ಟಿಗೆ ತೆಗೆದುಕೊಂಡು ತೀರ್ಮಾನವನ್ನು ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಆ ಮೇಲೆ ನಾನು ರಾಜ್ಯಪಾಲರ ಭಾಷಣವನ್ನು ಮುಗಿಸುವಾಗ ಕೊನೆಯಲ್ಲಿ ಏನು ಹೇಳಿದ್ದೇನೆ ಅಂದರೆ, "ರಾಜ್ಯಪಾಲರ ಭಾಷಣಕ್ಕೆ ಪ್ರತಿ ಭಾಷಣವನ್ನು ಮಾಡುವುದು, ಒಂದು ನೀತಿಯ ಬಗ್ಗೆ ವಿನಃ ಗೌರವಾನ್ವಿತ ರಾಜ್ಯಪಾಲರಿಗೆ ಯಾವುದೇ ರೀತಿಯಲ್ಲಿ ವೈಯಕ್ತಿಕವಾಗಿ ಅಗೌರವ ಸೂಚಿಸುವುದಕ್ಕೆ ಅಲ್ಲ ಎಂಬುದನ್ನು ಖಚಿತಪಡಿಸಿ, ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ" ಎಂದು ಹೇಳಿದ್ದೇನೆ.

ತಾವು ಸಂವಿಧಾನ ಬದ್ಧವಾಗಿ ರಾಜ್ಯಪಾಲರನ್ನು ಕರೆಯತಕ್ಕಂಥಾದ್ದು, ಅವರು ಬರುವಾಗ ತಾವು ಬಾಗಿಲಲ್ಲಿ ನಿಂತುಕೊಳ್ಳುವುದು, ಅವರನ್ನು ಬರಮಾಡಿಕೊಳ್ಳುವುದು, ಇತ್ಯಾದಿಯಾಗಿ ಇದೆಲ್ಲವೂ ದೇಶದಾದ್ಯಂತ ಒಂದು ರೀತಿಯಲ್ಲಿ ನಡೆಯುತ್ತಾ ಇದೆ. ಇಲ್ಲಿ ನನ್ನ ವಾದ ಏನೆಂದರೆ ಈ ವ್ಯವಸ್ಥೆಯ ವಿರುದ್ಧವೇ ನನ್ನ ತಕರಾರು. ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು. ರಾಜ್ಯಪಾಲರ ಭಾಷಣ ಅದು ಹೇಗೆ? ಇದನ್ನು ತಯಾರೂ ಮಾಡತಕ್ಕಂಥವರು ಸರಕಾರದವರು. ಪ್ರತಿ ಅಕ್ಷರ ಅಕ್ಷರವನ್ನೂ ತಯಾರು ಮಾಡತಕ್ಕಂಥವರು ಸರಕಾರದವರು. ಸಚಿವ ಸಂಪುಟದವರು ತೀರ್ಮಾನ ಮಾಡಿದಂತೆ ತಯಾರು ಮಾಡಿ, ಮುದ್ರಮ ಮಾಡಿ, ನೇರವಾಗಿ ಅವರ ಕೈಗೆ ಕೊಡತಕ್ಕಂಥಾದ್ದು, ಮಾನ್ಯ ರಾಜ್ಯಪಾಲರು ಬಂದು ಅದರಲ್ಲಿನ ಒಂದು ಅಕ್ಷರವನ್ನು ಬಿಡದೇ ನನ್ನ ಸರಕಾರ ಎಂದು ಹೇಳತಕ್ಕಂಥಾದ್ದು. ಇದೊಂದು ರೀತಿಯಲ್ಲಿ ಪರಕಾಯ ಪ್ರವೇಶ.

3.40 ಪಿ.ಎಂ.

ಈ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ. ಸರ್ಕಾರದ ಭಾಷಣಕ್ಕೆ ತೆರೆಯಮರೆಯಲ್ಲಿ ವಂದನಾ ನಿರ್ಣಯಮ ಡಿದ ಹಾಗೆ ಇದು. ಸರ್ಕಾರ ಕೊಟ್ಟ ಭಾಷಣಕ್ಕೆ ನಾವು ವಂದನಾ ನಿರ್ಣಯ ಅಂದರೆ ಏನು, ಈ ಭಾಷಣಕ್ಕೆ ಸಾಷ್ಟಾಂಗ ಹಾಕುತ್ತೇವೆ ಅಂತ ಏನು ಎಂದು ನನಗಿನ್ನೂ ಅರ್ಥವಾಗಿಲ್ಲ. ಹಾಗಾಗಿ ಈ ಸಭೆಯಲ್ಲಿ ಕೈಮುಗಿಯುತ್ತಾರೋ? ಭಾಷಣ ಸರಿಯಿಲ್ಲ, ಬಹಳ ಅನ್ಯಾಯ ಮಾಡಿದದೀರಿ, ಹೆಚ್ಚೆಹೆಚ್ಚಗೆ ಮೋಸ ಮಾಡಿದ್ದೀರಿ, ಈ ಭಾಷಣವನ್ನು ಸಂಪೂರ್ಣವಾಗಿ ನಾನು ತಿರಸ್ಕರಿಸುತ್ತೇನೆ ಹೀಗೆ ಎಲ್ಲಾ ಹೇಳುತ್ತಾರೆ ತಾನೇ? ಹಾಗೆ ಹೇಳುವುದಿಲ್ಲ ಎಂದು ಯಾರು ಹೇಳಿಬಿಡಿ, ಇಲ್ಲ ಸ್ವಾಮಿ, ಇದಕ್ಕೆ ಮಡಿಪಂಚೆ ಹಾಕಿ ಕೈಗಿಯುತ್ತೇವೆ ಅಂತ ಹೇಳುತ್ತೀರೋ? ಅದೇನು ಅಷ್ಟು ಮಡಿವಂತಿಕೆ? ಇದು ಸದನದ ಒಳಗೆ ನಡೆಯುವಂಥದ್ದು. ಸದನದ ಹೊರಗೆ ಈ ಭಾಷಣಕ್ಕೆ ಬೆಂಕೀನೇ ಇಟ್ಟೋ ಅಂತ ಇಟ್ಟುಕೊಳ್ಳೋಣ. ಸದನದ ಒಳಗೆ ನಿಮ್ಮ ಕಾನೂನು ಚೌಕಟ್ಟಿನಲ್ಲಿ ರಾಜ್ಯಪಾಲರ ಭಾಷಣ, ಯಾರೂ ಮುಟ್ಟುವಂತಿಲ್ಲ, ವಂದನೆ ಸಲ್ಲಿಸಬೇಕು, ಗಂಧದಕಡ್ಡಿ ಊದುಬತ್ತಿ ಹಚ್ಚಿ ಕೈಮುಗಿಯಬೇಕು. ಆದರೆ ಸದನದ ಹೊರಗಡೆ ಹೋಗಿ ಇದಕ್ಕೆ ಸೀಮೆಎಣ್ಣೆ ಹಾಕಿ ಬೆಂಕಿ ಸುಟ್ಟರೆ ಇದಕ್ಕೆ ಬೆಲೆಯೇನು? ಆಗ ನೀವೇನು ಮಾಡುತ್ತೀರಿ ನನ್ನ ಮೇಲೆ? ನಿಮ್ಮ ಹಕ್ಕು ಚ್ಯುತಿ ನಿರ್ಣಯ ಏನು ಮಾಡುತ್ತೀರಿ? ಅದಕ್ಕೇನಾದರೂ ರೀತಿನೀತಿ ಇದ್ದರೆ ಹೇಳಿಬಿಡಿ. ಇದು ಸಾರ್ವಜನಿಕವಾಗಿ ಸಮಗ್ರವಾಗಿ ಚರ್ಚೆಯಾಗಬೇಕು. ನಾಳೆ ಇದನ್ನು ಸುಡಬಹುದು, ಈ ಭಾಷಣದ ಪ್ರತಿಗಳು ಯಾವ್ಯಾವ ರೀತಿಯಲ್ಲಿ ಎಲ್ಲೆಲ್ಲಿ ಹೋಗಬಹುದು, ಹೊರಗಡೆ ಹೋಗಬಹುದು ಇದು ಸಾರ್ವಜನಿಕ ವಸ್ತು, ನಾಳೆ ಈ ಭಾಷಣವನ್ನು ಪತ್ರಕರ್ತರು ಮುದ್ರಣ ಮಾಡುತ್ತಾರೆ, ಆಗ ಆ ಪತ್ರಿಕೆ ಓದಿದನಂತರ ಕೆಲವು ಪತ್ರಿಕೆಗಳು ಹೋಟೆಲ್‌ಗೆ ಹೋಗುತ್ತವೆ, ಕೆಲವು ಪತ್ರಿಕೆಗಳು ರಸ್ತೆಗೆ ಹೋಗುತ್ತವೆ, ಆ ರಾಜ್ಯಪಾಲರ ವಂದನಾ ನಿರ್ಣಯದ ಭಾಷಣವೇ ಮುದ್ರಣವಾಗಿರುವುದು ಬೋಂಡ ಕಟ್ಟುವುದಕ್ಕ ಹೋಗುತ್ತದೆ, ವಡೆ ಕಟ್ಟವುದಕ್ಕೆ ಹೋಗುತ್ತದೆ, ಬೀಡಿ ಕಟ್ಟುವುದಕ್ಕೆ ಹೋಗುತ್ತದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನನ್ನ ಮೇಲೆ ನೀವು ಬಹಳ ಅನ್ಯಾಯವಾಗಿ ಬಿಟ್ಟಿದೆ ವಾಟಾಳ್ ನಾಗರಾಜ್ ಗಲ್ಲಿಗೇರಿಸಬೇಕೆನ್ನುವ ರೀತಿ ನಿರ್ಣಯ ತಂದಿದ್ದೀರಲ್ಲ...

SRI. H.D. DEVE GOWDA : There is no place for such arguments. Is this House or what else it is?

ಶ್ರೀ ವಾಟಾಳ್ ನಾಗರಾಜ್ : ಓಹೋ ಕೋಪಬ್ಯಾಡ್ರಿ, ಶಾಂತಿ, ಶಾಂತಿ, ಕೋಪಿಸಿಕೋಬೇಡ್ರಿ ದೇವೇಗೌಡರೇ. ನಾವು ನೀವೂ ಇಲ್ಲಿ ಕುಳಿತು ನೋಡಿದ್ದೇವೆ.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಹೇಳುವುದನ್ನೋ ನಾನು ಹೇಳುವುದನ್ನೋ ಜನ ಒಪ್ಪುತ್ತಾರೋ ಇಲ್ಲವೋ ಅನ್ನುವುದನ್ನು ಜನ ತೀರ್ಮಾನ ಮಾಡುತ್ತಾರೆ, ಆದೆಲ್ಲ ಬೇಡ. ರಾಜ್ಯಪಾಲರ ಭಾಷಣವನ್ನು ಬೋಂಡ ಕಟ್ಟುವುದಕ್ಕೆ ಎಂದು ಇಲ್ಲಿ ಚರ್ಚೆ ಮಾಡುವುದಾದರೆ ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಕಷ್ಟವಾಗುತ್ತದೆ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ : ಅಯ್ಯಯ್ಯೋ ತಾವ್ಯಾಕೆ ಇಷ್ಟು ಕೋಪ ಮಾಡಿಕೊಳ್ಳುತ್ತೀರಿ? ಅಲ್ಲಲ್ಲ, ಹೊರಗಡೆ ಏನಾಗುತ್ತದೆ ಎಂದು ಹೇಳಿದರೆ ತಾವು ಕೋಪ ಏಕೆ ಮಾಡುತ್ತೀರಿ? ಕೋಪ ಬೇಡ. ಮಾನ್ಯ ಸಭಾನಾಯಕರು ದಯಮಾಡಿ ತಾಳ್ಮೆ ಕಳೆದುಕೊಳ್ಳಬೇಡಿ. ಒಂದು ತರಹ ನೀವು ಹೀಗೆಂದು ತುಚ್ಛವಾಗಿ ಹೇಳಿದಿರಿ ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ನೋಡಿದೆ.

(ಗೊಂದಲ)

ನಿರ್ಣಯ ತಂದವರಾರು? ನಾನು ನಿರ್ಣಯ ತರಲಿಲ್ಲ.

ಅಧ್ಯಕ್ಷರು : ಒಂದು ನಿಮಿಷ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ನಾನಿಷ್ಟೇ ವಿನಂತಿ ಮಾಡುವುದು, ನಿಮಗೆ ಉತ್ತರ ಕೊಡುವ ಹಕ್ಕಿದೆ, ಆಗ ನಾವು ಬಳಸುವ ಭಾಷೆ ನಾಳೆ ಎಲ್ಲ ಪತ್ರಿಕೆಗಳಲ್ಲಿ ಮತ್ತೆ ಅಚ್ಚಾಗಿ ಬಂದರೆ, ನಾವು ರಾಜ್ಯಾಂಗಬದ್ಧವಾಗಿ ಒಪ್ಪಿಕೊಂಡಿರುವ ಒಬ್ಬ ರಾಜ್ಯಪಾಲರ, ರಾಷ್ಟ್ರಧ್ಯಕ್ಷರ ಭಾಷಣವನ್ನು ಬಳಸಬಾರದು ಭಾಷಾಪ್ರಯೋಗ ಮಾಡಿ ಅದನ್ನು ಪ್ರಚಾರಕ್ಕೆ ಬಿಟ್ಟಾಗ ನಾವು ಸಂವಿಧಾನಬದ್ಧವಾಗಿ ಸದಸ್ಯರಾಗಿ ಇಲ್ಲೇನು ಕೆಲಸ ಮಾಡುತ್ತಿದ್ದೇವೆ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡ ಹಾಗಾಗುತ್ತದೆ. ತಾವು ಬಹಳ ಹಿರಿಯರಿದ್ದೀರಿ, ತಮಗೆ ನೀತಿಬೋಧನೆ ಮಾಡಲು ನಾನು ಇಷ್ಟಪಡುವುದಿಲ್ಲ, ಆದರೆ ನಾವು ಬಳಸುವ ಪದಪ್ರಯೋಗದ ಬಗ್ಗೆ ನಾವೆಲ್ಲ ಎಚ್ಚರಿಕೆಯಿಂದಿರಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಆ ಕಾಗದ ಎಲ್ಲಿಗೆ ಹೋಗುತ್ತದೆ ಎಂಬ ಪ್ರಶ್ನೆ. ಹಾಗಾದರೆ ಪ್ರಧಾನಮಂತ್ರಿಗಳ ಫೋಟೋ ಇರುವ ಕಾಗದ ತೆಗೆದುಕೊಂಡು ಯಾರೋ ಏನೋ ಮಾಡುತ್ತಾರೆ? ಈ ಎಲ್ಲಾ ಸ್ಥಾನಗಳು ಒಬ್ಬ ಶಾಸಕರಾದಿಯಾಗಿ ಒಬ್ಬ ಗ್ರಾಮ ಪಂಚಾಯಿತಿ ಅಧ್ಯಕ್ಷರಾದಿಯಾಗಿ ಎಲ್ಲಾ ಜನಪ್ರತಿನಿಧಿಗಳು. ನಾವೆಲ್ಲ ಈ ದೇಶದಲ್ಲಿ ಒಪ್ಪಿಕೊಂಡಿರುವಂತೆ ರಾಜ್ಯಪಾಲರಾದವರು ರಾಜ್ಯಾಂಗಬದ್ಧವಾಗಿ ಒಂದು ವಿಶಿಷ್ಟ ಸ್ಥಾನ ಅಲಂಕರಿಸಿರುವ ವ್ಯಕ್ತಿ. ಈ ಸಂಸ್ಥೆಗಳನ್ನು ನಾವು ಲಘುವಾಗಿ ಕಾಣುವ ಪ್ರವೃತ್ತಿ ಒಳ್ಳೆಯದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಇದನ್ನು ಇಷ್ಟು ವಿಚಾರ ಮಾಡಿಯೇ ರೂಲ್ಸ್ ಕಮಿಟಿ ಮಾಡಿದ್ದುದು. ತಾವು ದಯಮಾಡಿ ರೂಲ್ಸ್ ಕಮಿಟಿ ನಡವಳಿಗಳನ್ನು ತರಿಸಿ ನೋಡಿ. ರೂಲ್ಸನ್ನು ಹೊಸದಾಗಿ ನಾವು ಮಾಡಿದಾಗ ಪ್ರಿವಿಲೇಜ್‌ನಲ್ಲಿ ತೆಗೆದುಕೊಳ್ಳಲು ಬರುವುದಿಲ್ಲ, ನಾಣಯ್ಯನವರು ಇದ್ದರು ರೂಲ್ಸ್ ಕಮಿಟಿಯಲ್ಲಿ, ಅದಕ್ಕೆ ರೂಲ್ 27 ಎಂದು ಇಂಟರ್‌ಡ್ಯೂಸ್ ಮಾಡಿದ್ದುದು ಅದಕ್ಕೆ ಒಬ್ಬ ಸದಸ್ಯರು ಪ್ರಿವಿಲೇಜ್ ಮೋಶನ್ ತರಬೇಕಾಗಿಲ್ಲ.

It is exclusively the prerogative of the Speaker to deal with the situation like this, because when the Houses of Legislature assembled together under Art. 175 or when the Members of the Assembly assembled together under Art. 175 of the Constitution, no member shall obstruct or interrupt his Address either before or after the Address, during its duration, any speech or point of order in any other manner and such obstruction or interruption shall be regarded as gross breach of order of the House and shall be dealt with by

the Speaker (mark the words 'by the Speaker) as such in the next sitting of the Assembly.

ಆದ್ದರಿಂದ ತಾವು ಅದನ್ನು ಎಂಟರ್‌ಟ್ರೇನ್ ಮಾಡಿದ್ದೇ ತಪ್ಪು. It is for you Mr. Speaker and you alone could deal with the subject. ಅದಕ್ಕೆ Rule 27 has been provided. ಇದನ್ನು ಬ್ರೀಚ್ ಆಫ್ ಪ್ರಿವಿಲೇಜ್‌ನಲ್ಲಿ ತಂದುಬಿಟ್ಟರೆ ಅದು ಡಿಬೇಟಾಗುತ್ತದೆ. It will further damage the issue. ಆದ್ದರಿಂದ ತಾವು ದಯಮಾಡಿ ಎಲ್ಲ ಕೇಳಿದ್ದೀರಿ You may kindly take your own suitable decision. ಅದಕ್ಕೇ ಹೇಳಿದೆ It is not a matter which can be debated like this. ದಯಮಾಡಿ ಒಳಗೆ ತಾವು ಸದಸ್ಯರನ್ನು ಕರೆಯಿಸಿ ಒಂದು ನಿರ್ಣಯಮಾಡಿ ತೀರ್ಪು ಕೊಡಬೇಕೇ ಹೊರತು ಈ ತರಹ ಓಪನ್ ಡಿಬೇಟಿಗೆ ಅವಕಾಶ ಕೊಟ್ಟರೆ ಏನಾಗುತ್ತದೆ ಎಂದರೆ that is why we introduced this Rule 27. ದಯಮಾಡಿ ತಮ್ಮಲ್ಲಿ ವಿಜ್ಞಾಪಿಸುವುದೇನೆಂದರೆ ಇದನ್ನು ಮುಂದೆ ಬೆಳುಸುವುದರ ಬದಲು you kindly deal it exclusively under Rule 27. Don't read with other provisions of the Rule. It is your prerogative and you have to exclusively deal with it, of course taking the house into confidence.

ಒಬ್ಬರು ಈ ತರಹ ಪ್ರಿವಿಲೇಜ್ ಮೋಶನ್ ತರುವುದು, ಅದಕ್ಕೆ ಈ ತರಹ ಡಿಬೇಟ್ ಮಾಡುವುದು I think it will be counter-productive and ultimately it will again be like allowing discussion on the Governor's Address. ರಾಜ್ಯಪಾಲರ ಹೆಸರು ಆ ವ್ಯವಸ್ಥೆ ವಿಷಯ ಅನಾವಶ್ಯಕವಾಗಿ ಪ್ರಶ್ನೆ ಮಾಡಲು ಅವಕಾಶ ಕೊಟ್ಟರೆ ಅದು ಬೆಳೆದುಕೊಂಡು ಹೋಗುತ್ತದೆ. ಆದ್ದರಿಂದ ದಯಮಾಡಿ consider it under rule 27 and deal with it exclusively. ಅವರನ್ನು ಯಾವ ರೀತಿ ಚೇಂಬರ್‌ಗೆ ಕರೆಯುತ್ತೀರಾ ಅಥವಾ ಇಲ್ಲೇ ತೀರ್ಮಾನಿಸುವ ತಮ್ಮ ಮನಸಿದ್ದರೆ we are not coming in the way. But this is not the way. ಅವರು ಮೂವ್ ಮಾಡುವುದು, ಇವರು ಮಾತಾಡುವುದು, ಇವರಿಗೆ ಅವಕಾಶ ಕೊಡುವುದು. It is a Governor's Address. It pertains to Governor's Address, not any other conduct of the Member.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದರು ನಾಗೇಗೌಡರು ತಂದದ್ದೇ ತಪ್ಪು ನೀವು ಅಲೋ ಮಾಡಬಾರದಿತ್ತು ಎಂದು. 27ನೇ ರೂಲ್ ಪ್ರಕಾರ ತಮಗೆ ಧಿಕಾರ ಇದೆ. ಸದಸ್ಯನಾಗಿ ನನಗೆ 190ರ ಪ್ರಕಾರ ಅಧಿಕಾರ ಇದೆ. ಆದ್ದರಿಂದ 190ಕ ಪ್ರಕಾರ ತಂದಿರುವುದು, ನನ್ನ ಪ್ರಿವಿಲೇಜನ್ನು ಕೊಶ್ಚನ್ ಮಾಡಲು ಅವರಿಗೆ ರೈಟಿಲ್ಲ. 191 ರೂಲ್ ಪ್ರಕಾರ ಸದಸ್ಯನಾಗಿ ನಾನು ಏನು ಹಕ್ಕಿದೆ ಅದನ್ನು ಚಲಾವಣ ಮಾಡಿದ್ದೇನೆ, ಅಧರ ಮೇಲೆ ಪ್ರಶ್ನೆ ಮಾಡಲು ಮೊಯಿಲಿಯವರಿಗೆ ಅಧಿಕಾರ ಇಲ್ಲ. He cannot question the rules again.

SRI M. VEERAPPA MOILY : Otherwise I withdraw myself. ತಾವು ಬೇಕಾದರೆ ಇದೇ ತರಹ ಮಾಡಿ ಡಿಬೇಟ್ ಮಾಡಿ....

ಎರಡು ದಿವಸ ಹೋಗಲಿ. ನಾವೇನೂ ಅಡ್ಡಿ ಬರುವುದಿಲ್ಲ. ಹೇಳಿದ್ದುದ್ದು ಏತಕ್ಕೆಂದರೆ we are party to the framing of the rule. The very purpose of rule was, there was some vaccum in dealing with the situation like this, ...

ಆ ವ್ಯಾಕ್ಯೂಮನ್ನು ಫಿಲಪ್ ಮಾಡಲಿಕ್ಕೆ rule 27 was brought. That is the intention. Of course, if we are not prepared to go introduction, I leave it to the House. ಏಕೆಂದರೆ ತಮಗೆ ಪರಮೋಚ್ಚ ಅಧಿಕಾರ ಇದೆ. ತಾವು ಬೇಕಾದರೆ ಪ್ರಿವಿಲೇಜ್‌ನಲ್ಲಿ ತನ್ನಿ. ರೂಲ್ಸ್ 27 ರಲ್ಲಿ ತನ್ನಿ. ಯಾವುದಾದರೂ ತನ್ನಿ. It is completely left t you, I have nothing more to add.

MR. SPEAKER : Interpretation of rule varies from person to person and each one of you are entitled to your own opinion. So, I have heard you, I have also herd the herd the Hon'ble Minister for Parliamentary Affairs in the forenoon. He has also made a submission. I have not yet spelt out what my mind is.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಪೂರಕವಾಗಿ ಹೇಳುವುದು ಇಷ್ಟೆ. ಈ 27ರ ನಿಯಮ ಕನ್ನಡದ ಅನುವಾದದಲ್ಲಿ ಇರುವ ಮಾತು, "175 ಅಥವಾ 176ನೇ ಅನುಚ್ಛೇದದ ಮೇರೆಗೆ ವಿಧಾನಮಂಡಲದ ಉಭಯ ಸದನಗಳೂ ಒಟ್ಟಿಗೆ ಸಭೆ ಸೇರಿದಾಗ, ಅಥವಾ ಭಾರತ ಸಂವಿಧಾನದ 175ನೇ ಅನುಚ್ಛೇದದ ಮೇರೆಗೆ ವಿಧಾನ ಸಭೆಯೊಂದೇ ಸಭೆ ಸೇರಿದಾಗ, ಯಾರೇ ಸದಸ್ಯರು ಯಾವುದೇ ಭಾಷಣ ಅಥವಾ ಕ್ರಿಯಾಲೋಪ ಮಾಡುವ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ರಾಜ್ಯಪಾಲರ ಭಾಷಣದ ಸಮಯದಲ್ಲಿ ಅದಕ್ಕೆ ಮುಂಚಿಯಾಗಲಿ ಅಥವಾ ತರುವಾಯವಾಗಲಿ ಅಡ್ಡಿ ಆಡಚಣೆಯುಂಟು ಮಾಡತಥದ್ದಲ್ಲ, ಅಥವಾ ವಿಘ್ನ ತರತಕ್ಕಂಥದ್ದಲ್ಲ, ಮತ್ತು ಅಂಥ ಅಡ್ಡಿ ಆಡಚಣೆ ಅಥವಾ ವಿಘ್ನವನ್ನು ಸದನದ ಆದೇಶದ ತೀವ್ರ ಉಲ್ಲಂಘನೆಯೆಂದು ಪರಿಗಣಿಸತಕ್ಕದ್ದು.

ಇಲ್ಲಿ ಸಭಾಧ್ಯಕ್ಷರಿಗೆ ಮಾತ್ರ ಈ ಅಧಿಕಾರ ಇದೆ ಎನ್ನತಕ್ಕಂಥ ಮಾತು ಕನ್ನಡದ ಈ ನಿಯಮಾವಳಿಯ ತರ್ಜುಮೆಯಲ್ಲಿ ಇಲ್ಲ. ತಾವು ಇಂಗ್ಲೀಷಿನ ರೂಲ 27ನ್ನು ಓದಿದಿರಿ. ಅದರಲ್ಲಿ ಸ್ಪೀಕರ್ ಇದನ್ನು ನಿರ್ಧರಿಸಬೇಕಾದಂಥದ್ದು ಇದೆ. ಇದು ಒಂದು ಹಕ್ಕುಚ್ಯುತಿಯಾದಂಥ ಪ್ರಶ್ನೆಯಾಗಲಾರದ್ದು ಎನ್ನುವ ಮಾತು ಇದರಲ್ಲಿ ಬಂದಿಲ್ಲ. ಇದು ಒಂದನೆಯದು, ಎರಡನೆಯದು, ಯಾವುದಾದರೂ ಒಂದು ಪರಿಚ್ಛೇದ ಅಥವಾ ಒಂದು ಸೆಕ್ಷನ್ ಅದು ಅದಷ್ಟಕ್ಕೆ ತಾನೇ ಇರುವುದಕ್ಕೆ ಸಾಧ್ಯವಿರುವುದಿಲ್ಲ. ಅದು ಪಠ್ಯಪೂರಕವಾಗಿರತಕ್ಕಂಥ ಮತ್ತೊಂದು ಕಾನೂನಿಗೆ ಅನುಗುಣವಾದಂಥ ರೀತಿಯಲ್ಲಿ ಇರುತ್ತದೆ. It has to be read along with rule 351 ಆಗಬೇಕು. ಇಲ್ಲದಿದ್ದರೆ rule 27 alone with have no sanctity as such.

ಆದ್ದರಿಂದ ಇದನ್ನು ಹೆಚ್ಚು ಬೆಳೆಸತಕ್ಕಂಥದ್ದು ಏನಿದೆ, ದಯಮಾಡಿ ಇದನ್ನು ಮಾಡಿಸದೆ ತಾವು ಇದರ ಬಗ್ಗೆ ತೀರ್ಮಾನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ದಯಮಾಡಿ ಸಹಕರಿಸಬೇಕು. ಇನ್ನಾರಿಗೂ ಅವಕಾಶ ಇಲ್ಲ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಬೇಗ ಮುಗಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಒಂದು ಪರಿಸ್ಥಿತಿಯಲ್ಲಿ ರಾಜ್ಯಪಾಲರನ್ನು ಅಗೌರವ ಮಾಡಬೇಕು ಎನ್ನುವ ಉದ್ದೇಶ ನನ್ನದಲ್ಲ ಅದು.

ಅಧ್ಯಕ್ಷರು : ದಯಮಾಡಿ ಸಹಕರಿಸಬೇಕು. ಇನ್ನಾರಿಗೂ ಅವಕಾಶ ಇಲ್ಲ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಬೇಗ ಮುಗಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅದು ಸ್ಪಷ್ಟ. ಅದರಲ್ಲೇನು ಎರಡನೆಯ ಅಭಿಪ್ರಾಯವಿಲ್ಲ. ಒಂದು ನೀತಿಯ ಪ್ರಶ್ನೆ, ಇಲ್ಲೇನು ಮಾತನಾಡಲೇಬಾರದು, ಅದರ

ಬಗ್ಗೆ ಪ್ರತಿಭಟನೆಯೂ ಮಾಡಬಾರದು, ಎಷ್ಟು ಇಲ್ಲಿ ಸಭಾತ್ಯಾಗಗಳು ನಡೆದಿಲ್ಲವೇನು ರಾಜ್ಯಪಾಲರು ಎದ್ದು ಭಾಷಣ ಮಾಡುವಾಗ ಇಲ್ಲಿ ಸಭಾತ್ಯಾಗಗಳು ನಡೆದಿಲ್ಲವೇ? ಅವರು ಭಾಷಣ ಮಾಡುವಾಗ ಸರಿಯಿಲ್ಲ ಎಂದು ಕೂಗಿಲ್ಲವೇ? ಅವರು ಭಾಷಣ ಮಾಡುವಾಗ ಇಲ್ಲಿ ಧಿಕ್ಕಾರ ಎಂದು ಹೇಳಿಲ್ಲವೇ? ಎಲ್ಲಾ ಬಹಳ ಮೌನವಾಗಿ ಬಾಯಿಗೆ ಬಟ್ಟೆ ಕಟ್ಟಿಕೊಂಡು ಕುಳಿತಿದ್ದರೇನು? ಇದೇ ಸದನದಲ್ಲಿ ನಡೆದಿದೆ. ನಡೆಯದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಮತ್ತು ಹಿರಿಯ ಸಚಿವರಾದ ಉಪಮುಖ್ಯಮಂತ್ರಿಗಳು ಗೋಪಾಲಗೌಡರ ಬಗ್ಗೆ ಮಾತನಾಡುವಾಗ ನಾನೂ ಇದ್ದೆ. ಗೋಪಾಲಗೌಡರು ಆ ಸದನದಲ್ಲಿ ಅವರ ಜೊತೆಯಲ್ಲಿ ಸದಸ್ಯನಾಗಿದ್ದಾಗಲೂ ಇದ್ದೆ. ಹಿಂದೆಯೂ ಸಹ ಅವರ ಭಾಷಣವನ್ನು ಕೇಳುವ ಅವಕಾಶ ಕೂಡ ನನಗೆ ದೊರಕಿತ್ತು. ಇವರು ಒಂದು ಮಾತ್ರ ಹೇಳಿದರು, ಅಧ್ಯಕ್ಷರು ಚೀಟಿಯನ್ನು ಬರೆದು ಕಳುಹಿಸಿದರು, ಆ ಚೀಟಿ ಹೊರಗಡೆ ಹರಿದು ಎಸೆದು ಹೋದರು. ಅದು ಅಧ್ಯಕ್ಷರ ಆದೇಶವನ್ನು ಹರಿದು ಹೋದಾಗ ಅಧ್ಯಕ್ಷರ ತೀರ್ಪು. ಇದು ಆದೇಶವಲ್ಲ. ಭಾಷಣ ಸರಿ ಇಲ್ಲ ಎಂದು ಹೇಳುವುದಕ್ಕೆ ನಮಗೆ ಅಧಿಕಾರವಿದೆ. ಹಕ್ಕು ಇದೆ. ಇದೇ ರೀತಿ ಮಾತನಾಡಬೇಕು, ಪದಗಳನ್ನು ಮಾತ್ರ ಈ ಪದಗಳನ್ನು ಹೀಗೆ ಉಪಯೋಗಿಸಬೇಕು ಎಂದು ಬೋರ್ಡ್ ಇಲ್ಲಿ ಹಾಕಿಬಿಡಿ. ಅದನ್ನು ಬಿಟ್ಟು ಬೇರೆ ಚೌಕಟ್ಟಿನಲ್ಲಿ ಹೋಗುವುದಿಲ್ಲ. ಈ ಸದಸ್ಯರು ಇಷ್ಟೇ ಮಾತನಾಡಬೇಕು, ಈ ಭಾಷಣ ಹೀಗೆ ಇರಬೇಕು, ಇದು ಏನಾಯಿತು ಎಂದು ಹೇಳಿದರೆ ಈ ಪ್ರಜಾಪ್ರಭುತ್ವದ ಈ ಮನೆಗೆ ಈ ಮಾತು ಸರಿಯಲ್ಲ. ಇದಕ್ಕೆ ನಮ್ಮದೇ ಆದಂಥ ಧೋರಣೆಯಲ್ಲಿ, ನಮ್ಮ ನಮ್ಮ ಧೋರಣೆಯಲ್ಲಿ ವಿರೋಧ ಮಾಡತಕ್ಕಂಥ ವ್ಯವಸ್ಥೆನಮಗಿದೆ. ಆದ್ದರಿಂದ ಈ ನೀತಿಯ ಪ್ರಶ್ನೆಯನ್ನು ಸಮಗ್ರವಾಗಿ ನಾನು ವಿರೋಧ ಮಾಡಿದ್ದೇನೆ. ಅಂದಾಕ್ಷಣಕ್ಕೆ ನಾನು ಹೇಳಿದ ಪದಗಳು ಈ ಭಾಷೆ, ಈ ಪುಸ್ತಕ ಹೊರಗಡೆ ಹೋದರೆ ಎಂದರೆ ನಾನು ಗೌರ್ನರ್ ವಿರುದ್ಧ ಮಾತನಾಡಿದೆ ಎಂತರೇ? ಅಲ್ಲ. ಪ್ರಾಮಾಣಿಕವಾಗಿ ಅಲ್ಲ. ನಾನು ಅನೇಕ ಸಾರಿ ರಾಜ್ಯಪಾಲರನ್ನು ಭೇಟಿ ಮಾಡುವುದಕ್ಕೆ ಹೋದಾಗ ಎಲ್ಲರಿಗಿಂತ ಹೆಚ್ಚಾಗಿ ನನ್ನನ್ನು ಭೇಟಿ ಮಾಡುವುದಕ್ಕೆ ಬರುತ್ತಾರೆ? ಮಾತನಾಡುತ್ತಾರೆ. ಅವರ ಜೊತೆಯಲ್ಲಿ ನಾನು ಹೋದಾಗ ಅನೇಕ ಸಾರಿ ಮಾತನಾಡುತ್ತಾರೆ. ವಾಟಾಳ್ ನಾಗರಾಜ್‌ರವರು ಎಲ್ಲಿ ಎಂದು ಕೇಳಿರುವುದೂ ಉಂಟು. ಅಂದರೆ ನಮ್ಮ ಅವರ ಮಧ್ಯೆ ಭಿನ್ನಾಭಿಪ್ರಾಯವೇ. ಅವರ ಬಗ್ಗೆ ಬಹಳ ವಿರಸದಿಂದ ಮಾತನಾಡಿದೆ ಎಂತಲೇನು? ಅಲ್ಲ. ಆ ಪ್ರಶ್ನೆಯಲ್ಲ. ನಾನು ಕೆಲವು ನೀತಿಯ ಪ್ರಶ್ನೆ ಮಾತನಾಡಿದಾಗ ಇದನ್ನು ವಾಟಾಳ್ ನಾಗರಾಜ್‌ರವರು ರಾಜ್ಯಪಾಲರ ಮೇಲೆ ಬಹಳ ಮಾತನಾಡಿದರು ಎಂದರೆ ನನಗೆ ಆ ಭಾವನೆ ಇಲ್ಲ. ಆದ್ದರಿಂದ ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ಗೋಪಾಲಗೌಡರು ಈ ಸದನದಲ್ಲಿ ಇದ್ದಾಗ ತಮಗೆ ಜ್ಞಾಪಿಸುತ್ತೇನೆ. ತಮಗೆ ಗೊತ್ತಿದೆ. ಜಯಚಾಮರಾಜ ಒಡೆಯರು ರಾಜಪ್ರಮುಖರಾಗಿದ್ದರು. ಆ ಪೀಠದಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವಾಗ, ಗೋಪಾಲಗೌಡರು ರಾಜ್ಯಪಾಲರ ಭಾಷಣವನ್ನು ಅದೇ ಆ ಸ್ಥಳದಲ್ಲಿ ಹೋಗುವಾಗ ಕೆಳಗಡೆ ಇಟ್ಟು ಒಂದು ಸಾರಿ ತುಳಿಯುತ್ತೇನೆ, ಎರಡು ಸಾರಿ ತುಳಿಯುತ್ತೇನೆ, ಮೂರು ಸಾರಿ ತುಳಿಯುತ್ತೇನೆ ಎಂದು ಬಾಯಲ್ಲಿ ಹೇಳಿ ತುಳಿದರು. ಅವರನ್ನು ಈ ಸದನದಿಂದ ಹೊರಗಡೆ ಹಾಕಿದರು. ತಮ್ಮ ಅಧಿಕಾರ ಅಧ್ಯಕ್ಷರ ಪೀಠಕ್ಕೆ ಸೇರಿರತಕ್ಕಂಥದ್ದು. ಯಾವ ಸಂದರ್ಭದಲ್ಲಿ ಯಾರಿಗೆ ಏನು ಶಿಕ್ಷೆ ಕೊಡಬೇಕು ಎನ್ನುವ ತೀರ್ಮಾನ, ಅದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಇದು ನಡೆದೇ ಇಲ್ಲ. ಬಹಳ ಗಾಂಭೀರ್ಯವಾಗಿ ಎಲ್ಲಾ ನಡೆದು ಹೋಗಿದದೆ ಎನ್ನುವುದಲ್ಲ. ಮತ್ತೊಂದು ಈ ಧ್ವನಿವರ್ಧಕವನ್ನೇ ಮುರಿದರು. ಗೋಪಾಲಗೌಡರು ಈ ಧ್ವನಿವರ್ಧಕವನ್ನೇ ಮುರಿದರು. ಅವರು ಭಾಷಣ ಮಾಡುವಾಗ ಅಧ್ಯಕ್ಷರು ವರ್ತನೆ ಸರಿಯಿಲ್ಲ ಎಂದು ಹೇಳಿದರು. ನನಗೆ ಬಂದಂಥ ಉದ್ವೇಗದಲ್ಲಿ ಧ್ವನಿವರ್ಧಕವಲ್ಲ, ವ್ಯಕ್ತಿಯ ತಲೆ ಸಿಕ್ಕಿದ್ದರೆ ತಲೆಯನ್ನೇ ಮುರಿಯುತ್ತಿದ್ದೆ ಎಂದರು. ಸಂಸದೀಯ ಸಚಿವರಾದ ಪುಟ್ಟಸ್ವಾಮಿಯವರೇ ನನ್ನ

ಎದುರಿಗೆ ಸಿಕ್ಕಿದ್ದರೆ ನಾನು ತಲೆಯನ್ನೇ ಮುರಿಯುತ್ತಿದ್ದೆ. ಆ ಉದ್ವೇಗ ನನಗೆ ಬಂತು. ನಿಜ. ಅಂದರೆ ಅವರ ಹಿಂದೆ ಇರತಥದ್ದು ಯಾರನ್ನೋ ಕತ್ತು ತೆಗೆಯಬೇಕು ಆ ಉದ್ದೇಶವಲ್ಲ್ಲ. ಇದು ನಡೆದಿದೆ. ಏನು ಮಡಿವಂತಿಕೆಯಿಂದಲೇ ಕುಳಿತುಕೊಳ್ಳಬೇಕೆಂದಲ್ಲ. ತಮ್ಮ ಪೀಠವನ್ನು ಹಿಂದೆ ಮುತ್ತಿರತಕ್ಕಂಥದ್ದು ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀಮಾನ್ ಬೊಮ್ಮಾಯಿಯವರು ತಮ್ಮ ಪೀಠಕ್ಕೆ ಹತ್ತಿದ್ದರು ಸ್ವಾಮಿ. ತಮ್ಮ ಪೀಠ ಅಂದರೆ ಆ ಪೀಠಕ್ಕೆ ಇದರಲ್ಲೇನು ಮಡಿವಂತಿಕೆ ಇಲ್ಲ. ಆಮೇಲೆ ಮಾನ್ಯ ಉಪಮುಖ್ಯಮಂತ್ರಿಗಳು ಹಿರಿಯರು, ಅವರಿಗೆ ಬಹಳ ಅಪಾರವಾದಂಥ ಜ್ಞಾನ ಇರತಕ್ಕಂಥವರು. ಅವರನ್ನು ನಾನು ಒಪ್ಪುತ್ತೇನೆ. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಇಲ್ಲಿಂದ ಗುಂಡುರಾಯರ ಹತ್ತಿರಕ್ಕೆ ಹೋದರು.

ಅಧ್ಯಕ್ಷರು : ಅವರೆಲ್ಲ ಹಾಗೆ ಮಾಡಿದ್ದರು ಎಂದು ಹೇಳಿ ತಾವು ಮಾಡಿದ್ದನ್ನು ಸಮರ್ಥನೆ ಮಾಡಿಕೊಳ್ಳುವುದಾದರೆ ಅದನ್ನು ಬೇಗ ಮುಕ್ತಾಯ ಮಾಡಿ. ಇಲ್ಲ ನಾವು ಬೇರೆ ರೀತಿ ಆಲೋಚನೆ ಮಾಡೋಣ ಎಂದರೆ ಮಾಡೋಣ. ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ಇದು ಆಗಬಾರದಾಗಿತ್ತು. ಗೋಪಾಲಗೌಡರು ಅನಂತರ ಏನು ಮಾಡಿದರು ಎನ್ನುವುದನ್ನು ನನಗೆ ಹೇಳಿ. ಗೋಪಾಲಗೌಡರು ನೀವು ಹೇಳಿದ್ದನ್ನೆಲ್ಲ ಮಾಡಿದ್ದಾರೆ, ನಿಜ. ಗೋಪಾಲಗೌಡರು ನಿಮಗೆ, ನಮಗೆ ಎಲ್ಲರಿಗೂ ಕೂಡ ಅವರು ಮಾರ್ಗದರ್ಶಕರು. ತದನಂತರ ಏನು ಮಾಡಿದರು, ಅದನ್ನು ಈಗ ತಾವು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ತಾವು ಏಕೆ ಹೀಗೆ....

ಅಧ್ಯಕ್ಷರು : ಸಮಯದ ಅಭಾವ ಅಷ್ಟೆ. ನನ್ನ ಮೇಲೆ ಅಲಿಗೇಷನ್ ಇದೆ. ನಿಮ್ಮ ಬಗ್ಗೆ ಬಹಳ ಸಡಿಲ ಇರುತ್ತೇನೆ ಎಂದು.

ಶ್ರೀ ವಾಟಾಳ್ ನಾಗರಾಜ್ : ನಾನೊಂದು ನಿಮ್ಮಲ್ಲಿ ಮನವಿ ಮಾಡಿದೆ. ನೀವು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಿ. ನಾನೇನು ಬಂದು ನಿಮ್ಮನ್ನು ಸ್ವಾಮಿ ದಯಮಾಡಿ ಎಂದು ಹೇಳಿಲ್ಲ್ಲ. ಮತ್ತೆ ನಮ್ಮ ಸ್ನೇಹಿತರನೇಕರು ಏನು ಬೇಡಿ, ಏನೂ ಆಗಿಹೋಗಿದೆ, ಅವರ ಕೃಪೆಯೂ ಬೇಕಾಗಿಲ್ಲ, ಇವರ ಕೃಪೆಗಳು ಬೇಕಾಗಿಲ್ಲ. ಏಕೆ ಇವರ ಕೃಪೆ ನನಗೆ? ಏನೂ ಬಿಟ್ಟುಬಿಡಿ ಪಾಪ, ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಿ. ಏನು ಹೇಳುವುದು? ನಾನು ಹೇಳಿರುವುದು ಸ್ಪಷ್ಟ. ನಾನು ನನ್ನ ಭಾಷಣದಲ್ಲಿ ಹೇಳಿದ್ದೆ. ನೀವು ಏನೂ ಬೇಕಾದರೂ ಕ್ರಮ ತೆಗೆದುಕೊಳ್ಳಿ. ಅದಕ್ಕೆ ಕೃಪೆ ಏನೂ ಬೇಡ. ಯಾರ ಕೃಪೆಯೂ ಬೇಡ.

ಅಧ್ಯಕ್ಷರು : ಗೋಪಾಲಗೌಡರಿಂದ ಕೃಪೆಗೆ ಹೋಗಿಬಿಟ್ಟಿರಿ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಹೇಳುತ್ತಿದ್ದೇನೆ. ಶಾಸನಸಭೆಗಳು ಈ ಕಲಾಪ ನಡೆಯದೇ ಇರುವ ಅನೇಕ ಶಾಸನಸಭೆಗಳನ್ನು ತಾವು ನೋಡಿರಬಹುದು, ಪಶ್ಚಿಮ ಬಂಗಾಳದಲ್ಲಿ ಏನಾಗಿದೆ ಎಂದು ನೋಡಿದ್ದೀರಿ, ಕೇರಳದಲ್ಲಿ ನೋಡಿದ್ದೀರಿ, ತಮಿಳುನಾಡಿನಲ್ಲಿ ಮೊನ್ನೆ ತಾನೇ ತಾವು ನೋಡಿದ್ದೀರಿ. ಮುಖ್ಯಮಂತ್ರಿಗಳು ರಾಜ್ಯಪಾಲರ ಮುಖವನ್ನೇ ನೋಡಲಿಲ್ಲ, ಮುಖ್ಯಮಂತ್ರಿಗಳು ಸದಸ್ಯರಲ್ಲ, ಅವರು ರಾಜ್ಯಪಾಲರ ಮುಖವನ್ನು ನೋಡಲಿಲ್ಲ. ಅವರು ಭಾಷಣ ಮಾಡುವಾಗ 'ಈ ಸರ್ಕಾರ' 'ಈ ಸರ್ಕಾರ' ಎಂದು ಹೇಳಿದರೇ ಹೊರತು "ನಮ್ಮ ಸರ್ಕಾರ" ಎಂದು ಹೇಳಿಲ್ಲ, ಇಂಥದ್ದು ನಡೆದಿದೆ. ಅನೇಕ ಕಡೆ ದೇಶದ ಎಲ್ಲಾ ಶಾಸನಸಭೆಗಳಲ್ಲಿ ನಡೆದಿದೆ. ಆದರೆ ತಮಗೆ ನಾನು ಏನು ಹೇಳುತ್ತೇನೆ ಎಂದರೆ ಇದು ಈ ನಿರ್ಣಯವನ್ನು ನಾನು ಬಯಸಿ ತಂದದ್ದಲ್ಲ, ಸರ್ಕಾರ ಏತಕ್ಕೆ ತಂದರೋ ನನಗಂತೂ ಗೊತ್ತಿಲ್ಲ.

ನಮ್ಮಲ್ಲಿ ಪ್ರಮುಖವಾದಂಥ ಚರ್ಚೆ ಈಗ ಬರಬೇಕಾಗಿತ್ತು. ಬಹಳ ಪ್ರಮುಖವಾದುದು. ಶಾಸಕಾಂಗಕ್ಕೆ ವಿರೋಧಪಕ್ಷಕ್ಕೆ ಶಾಸಕರಿಗೆ ಈ ಸರ್ಕಾರ....

(ಗೊಂದಲ)

ಅಧ್ಯಕ್ಷರು : ಚರ್ಚೆ ಸೀಮಿತವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ನಿರ್ಣಯ ಏತಕ್ಕೆ ಬಂತು, ಆ ಮಹತ್ತರವಾದಂಥದ್ದನ್ನು ತಡೆಯಬೇಕು ಎನ್ನುವ ಉದ್ದೇಶದಿಂದ ಈ ಸರ್ಕಾರ ನೇರವಾಗಿ ಈ ನಿರ್ಣಯವನ್ನು ತಂದಿದೆ.

ಈ ನಿರ್ಣಯಕ್ಕೆ ನಿಜವಾಗಿ ನಾನು ಹೇಳುತ್ತೇನೆ, ಪ್ರಾಮಣಿಕವಾಗಿ ಮಾತನಾಡೋಣ. ಈ ನಿರ್ಣಯ ತರದೇ ಇದ್ದರೆ ಏನು ಆಗುತ್ತಿತ್ತು? ಈ ನಿರ್ಣಯ ತಂದು ಸರ್ಕಾರಕ್ಕೆ ಏನು ಲಾಭ ಆಯಿತು? ನಿಮಗೆ ಏನು ಲಾಭ ಬಂತು? ನಾನಂತೂ ನಿಮಗೆ ಶರಣು ಹೊಡೆಯುವುದಿಲ್ಲ. ನೀವು ಏನೇ ನಿರ್ಣಯ ತೆಗೆದುಕೊಂಡು ಬನ್ನಿ. ಏನು ಗಲ್ಲಿಗೆ ಹಾಕುತ್ತೀರಾ ನೀವು? ಎಂತಾದ್ದು ಇಲ್ಲ. ಯಾವ ಪ್ರಮುಖವಾದ ವಿಚಾರಾ ಚರ್ಚೆ ಆಗಬೇಕಿತ್ತು, ಅದನ್ನು ದಾರಿ ತಪ್ಪಿಸುವುದಕ್ಕೆ ನೀವು ನಿರ್ಣಯ ತಂದಿದ್ದೀರಿ. ಆದ್ದರಿಂದ ನಾನು ಹೇಳುತ್ತಿದ್ದೇನೆ. ನಿಮ್ಮನ್ನು ಕೋಪತಾಪಕ್ಕೆ ಸಿಕ್ಕಿಸುವುದಕ್ಕೆ ನಾನು ತಯಾರಾಗಿಲ್ಲ. ಏಕೆಂದರೆ ಮುಖ್ಯಮಂತ್ರಿಗಳು ಬಹಳ ಕೋಪದಲ್ಲಿ ಎದ್ದರು, ಅದೇ ರೀತಿ ನೀವು ಕೋಪದಲ್ಲಿ ಏಳುತ್ತೀರಿ, ಅದೇ ರೀತಿ ಶಾಸಕರು ಕೆಲವು ಕೋಪದಲ್ಲಿ ಏಳುತ್ತಾರೆ, ಅದು ಸರಿಯಲ್ಲ. ನನಗೆ ಈ ಮುನ್ಸೂಚನೆಗಳು ಎಲ್ಲಾ ಗೊತ್ತಾಗುತ್ತಿದೆ. ಬಹಳ ಸುದೀರ್ಘವಾಗಿ ಮಾತನಾಡಬೇಕು ಎನ್ನತಕ್ಕ ಚಿಂತನೆ ಇದೆ. ಈ ಚಿಂತನೆಗೆ ಗೊದಮ ಬಂದ ಹಾಗಾ, ಹಳ್ಳಿಗಳಲ್ಲಿ ರಥಗಳು ಇರುತ್ತವೆ, ಅದಕ್ಕೆ ಗೊದಮ ಬಂದಂತೆ. ಆ ರಥ ಸುಖವಾಗಿ ಹೋಗುವಾಗ ಗೊದಮ ಎಂದು ಹಾಕುತ್ತಾರೆ ನೀವು ಕೇಳಿರಬಹುದು. ಆ ದೊಡ್ಡ ರಥಕ್ಕೆ ಗೊದಮ ಹಾಕಿದ ತಕ್ಷಣ ಶಬ್ದ ಇಲ್ಲದೇ ನಿಂತು ಹೋಗುತ್ತದೆ. ಆ ರೀತಿ ಈಗ ನಿಮ್ಮ ಗೊದಮ ನನ್ನನ್ನು ನಿಲ್ಲಿಸುತ್ತಿದೆ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ನಾವ್ಯಾರೂ ಉಳಿಯುವುದಕ್ಕೆ ಸಾಧ್ಯ ಇಲ್ಲ. ಏನು ಕೋಪ, ತಕ್ಷಣ ಏಕೆ ಕೋಪ ಮಾಡಿಕೊಳ್ಳಬೇಕು? ನಾವೇನು ತಪ್ಪು ಮಾಡಿದ್ದೇವೆ. ಇದೆಲ್ಲಾ ಪ್ರಜಾಪ್ರಭುತ್ವದಲ್ಲಿ ಮಾತುಕತೆ ಸಂವಾದ ಇದ್ದಿದ್ದೇ. ಹೇಳಿದ್ದೇ. ನಾಳೆ ಆ ಕಡೆ ಹೋದಾಗ ನಾನು ತಮಗೆ ಹೇಳುತ್ತೇನೆ. ಇವರೆಲ್ಲರೂ ಕಾಂಗ್ರೆಸ್ ಸರ್ಕಾರ ಆ ಕಡೆ ಇದ್ದು ಇವರೆಲ್ಲರಿಗೂ ಈ ಕಡೆ ಇದ್ದಿದ್ದರೆ, ನಾಗೇಗೌಡರು ಕೊಡುತ್ತಿದ್ದರು. ಆಳುವ ಪಕ್ಷ ಆದ್ದರಿಂದ ಸ್ವಲ್ಪ ವೇಷಭೂಷ ಹಾಕಿಕೊಂಡು ಆ ನಾಟಕ ಆಡುತ್ತಿದ್ದಾರೆ. ಇದು ಬೇಡ, ಪ್ರಜಾಪ್ರಭುತ್ವದಲ್ಲಿ ಮಾತುಕತೆ ಸಂವಾದ ಇದ್ದಿದ್ದೇ. ಹೇಳಿದ್ದೇ. ನಾಳೆ ಆ ಕಡೆ ಹೋದಾಗ ನಾನು ತಮಗೆ ಹೇಳುತ್ತೇನೆ. ಇವರೆಲ್ಲರೂ ಕಾಂಗ್ರೆಸ್ ಸರ್ಕಾರ ಆ ಕಡೆ ಇದ್ದು ಇವರೆಲ್ಲರೂ ಈ ಕಡೆ ಇದ್ದಿದ್ದರೆ ನನ್ನ. ಇವರೆಲ್ಲರೂ ಸ್ವಲ್ಪ ಬೆಂಬಲ ಕೊಡುತ್ತಿದ್ದರು. ಆಳುವ ಪಕ್ಷ ಆದ್ದರಿಂದ ಸ್ವಲ್ಪ ವೇಷಭೂತ ಹಾಕಿಕೊಂಡು ಆ ನಾಟಕ ಆಡುತ್ತಿದ್ದಾರೆ. ಇದು ಬೇಡ, ಪ್ರಜಾಪ್ರಭುತ್ವದಲ್ಲಿ ಈ ತರಹ ನಾಟಕಗಳನ್ನು ನಾನೂ ನೋಡಿದ್ದೇನೆ, ಇರಬಹುದು.

ಶ್ರೀ ಎಸ್. ಪುಟ್ಟೇಗೌಡ : ನಾವು ಹೊಸ ಸದಸ್ಯರು ನಾವು ನಮ್ಮ ಅಭಿಪ್ರಾಯವನ್ನು ಹೇಳಲು ಇವರು ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಎಸ್. ಪುಟ್ಟೇಗೌಡ : ನಮಗೆ ಜನ ನಾಟಕ ಆಡುವುದಕ್ಕೆ ಕಳುಹಿಸಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಬಹಳ ನೋವು ಆಗಿದೆ.

(ಗೊಂದಲ)

ಶ್ರೀ ಎಸ್. ಪುಟ್ಟೇಗೌಡ : ನಾಟಕ ಎನ್ನುವ ಪದ ಬಳಸುವುದು ಸರಿಯಲ್ಲ. ಯಾವ ವಿಷಯವನ್ನು ಪ್ರಸ್ತಾಪ ಮಾಡಬೇಕೋ ಮಾನ್ಯ ಸದಸ್ಯರು ಮಾಡಲಿ, ಆದರೆ ಇಷ್ಟೊಂದು ಬಾಯನ್ನು ಏಕೆ ಹರಿಬಿಡುತ್ತೀರಿ?

(ಗೊಂದಲ)

ನಾವ ಹೊಸ ಸದಸ್ಯರು, ಯಾವ ರೀತಿ ಸಂಸದೀಯಗಳನ್ನು ಬಳಸುತ್ತಾರೆ ಯಾವ ರೀತಿ ನಡೆದುಕೊಳ್ಳುತ್ತಾರೆ ಎಂದು ನಿಮ್ಮ ವರ್ತನೆ ನೋಡಿ ತಿಳಿದುಕೊಳ್ಳುವುದಕ್ಕೆ ನಾವು ಕುಳಿತಿದ್ದಿರೆ ಇಲ್ಲಿ ನಾಟಕ ಎನ್ನುವ ಪದ ಬಳಸುವುದು ಸರಿಯಲ್ಲ. ನಾವೆಲ್ಲ ನಾಟಕ ಆಡುವುದಕ್ಕೆ ಬಂದಿಲ್ಲ. ಯಾರೂ ನಮಗೆ ಬಣ್ಣ ಬಳಿದಿಲ್ಲ. ಜನ ಬಹಳ ಗಂಭೀರವಾದ ಸಮಸ್ಯೆಗಳ ಬಗ್ಗೆ ಮಾತನಾಡಲು ಕಳುಹಿಸಿದ್ದಾರೆ. ದಯಮಾಡಿ ಚಿಂತನೆ ಮಾಡಬೇಕು, ಇಂತಹ ಹಿರಿಯ ಸದಸ್ಯರಿಂದ ಕಲಿಯಬೇಕೆಂದು ನಮ್ಮನ್ನು ಕಳಿಸಿದ್ದಾರೆ.

ಅಧ್ಯಕ್ಷರು : ಆಯಿತು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅವರನ್ನು ಪ್ರಶಂಸೆ ಮಾಡುತ್ತಿದ್ದೇನೆ. ಏನು ಪ್ರಸಂಶೆ ಎಂದರೆ ಅವರೆಲ್ಲರೂ ಈ ಕಡೆ ಇದ್ದಿದ್ದರೆ ನಮಗೆ ಬೆಂಬಲ ಕೊಡುತ್ತಿದ್ದರು ಎಂದು. ಇದು ಪ್ರಸಂಶೆ ಅಲ್ಲವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಮಾಡಿರತಕ್ಕ ಭಾಷಣ ನನ್ನ ದೃಷ್ಟಿಯಲ್ಲಿ ನಾನು ಸರಿಯಾಗಿ ತಂದಿದ್ದೇನೆ. ನಾನು ನನ್ನ ಭಾಷಣದಲ್ಲಿ ಕೊನೆಯದಾಗಿ ಸ್ಪಷ್ಟಪಡಿಸಿದ್ದೇನೆ. ನನ್ನ ಭಾಷಣದ ಪ್ರತಿಯನ್ನು ನಾನು ತಮಗೆ ಕಳಿಸುತ್ತೇನೆ. ನಾನು ನೇರವಾಗಿ ಹೇಳಿದ್ದೇನೆ. ಇದು ಮತ್ತೊಮ್ಮೆ ಓದಿ ಎಂದರೆ ನಾನು ಓದುತ್ತೇನೆ. ಅದರಲ್ಲಿ ಇನ್ನೊಂದು ಸಾರಿ....

ಅಧ್ಯಕ್ಷರು : ದಯಮಾಡಿ ಕೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರೆಲ್ಲ ಬೆಂಬಲ ಕೊಡುತ್ತಿದ್ದರು ಆ ಪರಿಸ್ಥಿತಿ ಬಂದೇ ಬರುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ನಾನು ಇದನ್ನು ಬೇರೆ ದಿಕ್ಕಿಗೆ ತಿರುಗಿಸುವುದಕ್ಕೆ ಪ್ರಯತ್ನ ಪಡುವುದಿಲ್ಲ. ಅದಕ್ಕೆ ನಾನು ಮಾನ್ಯ ಸಭಾ ನಾಯಕರನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ತಾವು ಏಕೆ ಕೋಪ ಮಾಡುತ್ತೀರಿ? ಇದರಿಂದ ಏನು ಪ್ರಯೋಜನ? ನೀವು ನಕ್ಕರೆ ನಮಗೆಲ್ಲಾ ಸಂತೋಷ, ಕೋಪಿಸಿಕೊಂಡರೆ ಕಷ್ಟ? ತಾವು ದಯ ಮಾಡಿ ನಗಿ; ಇಷ್ಟು ಕೋಪಿಸಿಕೊಂಡರೆ ಹೇಗೆ? ಅವರು ನಕ್ಕರು. ಈಗ ನಕ್ಕರು ಸಧ್ಯ. ಅವರು ನಕ್ಕಿದ್ದರಿಂದ ನಮಗೆಲ್ಲಾ ಸಂತೋಷ. ಈಗ ಚರ್ಚೆ ಮಾಡೋಣ ಅದನ್ನು ಬಿಟ್ಟು ಕೋಪಿಸಿಕೊಂಡರೆ ಹೇಗೆ? ನಾನು ಪಟೇಲ್ ಅವರ ತರಹ ನಿಮ್ಮ ಹತ್ತಿರ ಬರುವುದಕ್ಕೆ ಸಾಧ್ಯವೇ? ಅದು ಸಾಧ್ಯವಿಲ್ಲ. ನಾವು ನೀವು ಚರ್ಚೆ ಮಾಡೋಣ. ಅಂತಿಮವಾಗಿ ಒಂದು ತೀರ್ಮಾನಕ್ಕೆ ಬರಲಿ. ಆದ್ದರಿಂದ ನಾನು ಮಾಡಿರತಕ್ಕ ಭಾಷಣ, ನಾನು ಕಾಲಿನಲ್ಲಿ ಅಂತೂ ತುಳಿದಿಲ್ಲ, ಹರಿದು ಹಾಕಿದ್ದುದು ನಿಜ. ಸಭಾ-ತ್ಯಾಗ ಮಾಡಿದ್ದುದು ನಿಜ, ಪ್ರತಿಭಟನೆ ಮಾಡಿದ್ದುದು ನಿಜ, ಕಪ್ಪು ಬಾವುಟ ಪ್ರದರ್ಶಿಸಿದ್ದುದು ನಿಜ, ಆದ್ದರಿಂದ ಇದರಲ್ಲಿ ನಾನು ಮಾಡಿದ್ದು ನನಗೆ ಸರಿ ಎಂದು ನಾನು ಅಂದುಕೊಂಡಿದ್ದೇನೆ. ಇದರಿಂದ ಉದ್ದೇಶ ಏನು ಎಂದರೆ, ವೈಯಕ್ತಿಕವಾಗಿ ರಾಜ್ಯಪಾಲರಿಗೆ ಅಗೌರವ ಮಾಡಬೇಕು ಎಂಬ ಉದ್ದೇಶ ಇಲ್ಲ. ಅದನ್ನು ನಾನು ನನ್ನ ಭಾಷಣದಲ್ಲಿ ಸ್ಪಷ್ಟಪಡಿಸಿದ್ದೇನೆ.

ಆದ್ದರಿಂದ ಇದಕ್ಕಾಗಿ ನಿಲುವಳಿ ತಂದು ಬೆಳಿಗ್ಗೆ 11 ಗಂಟೆಯಿಂದ ಇಲ್ಲಿಯವರೆಗೆ ಚರ್ಚೆಗೆ ತಂದಿದ್ದಾರೆ. ನಾನು ನಿಮ್ಮನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಯಾರು ನಿರ್ಣಯವನ್ನು ತಂದರು ಅವರು ಇದಕ್ಕೆ ಜವಾಬ್ದಾರರು. ಈ ಸದನದ ಕಾಲವನ್ನು ವ್ಯಯಮಾಡಿದ್ದಕ್ಕೆ, ಹಣವನ್ನು ವ್ಯಯ ಮಾಡಿದ್ದಕ್ಕೆ ಸಂಪೂರ್ಣವಾದ ಹೊಣೆ ಅವರದೇ ಹೊರತು ನಮ್ಮದಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಅಧ್ಯಕ್ಷರು : ಸನ್ಮಾನ್ಯ ವಾಟಾಳ್ ನಾಗರಾಜ್ ಅವರಲ್ಲಿ ನಾನು ಏನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ ಯಾವುದು ಸಾಧು ಅಲ್ಲವೋ, ಯಾವುದನ್ನು ಈ ಸದನ ಅಪೇಕ್ಷಿಸುವುದಿಲ್ಲವೋ ಅಂತಹ ಕೆಲವು ಘಟನೆಗಳು ನಿನ್ನೆ ನಡೆದಿದ್ದಾವೆ. ಅದರ ಬಗ್ಗೆ ಎಲ್ಲಾ ಸದಸ್ಯರು ಕೂಡ ಹೇಳಿದ್ದಾರೆ. ನಮ್ಮ ಹಿರಿಯ ಸಹೋದ್ಯೋಗಿಗಳಾದ ಮಾನ್ಯ ಜೆ.ಎಚ್. ಪಟೇಲ್ ಅವರು ಶ್ರೀಮಾನ್ ಗೋಪಾಲ್ ಗೌಡರ ನಿದರ್ಶನವನ್ನು ಹೇಳತಕ್ಕ ಸಂದರ್ಭದಲ್ಲಿ, ನಂತರ ಗೋಪಾಲ ಗೌಡರು ಏನು ಮಾಡಿದರು ಎನ್ನುವುದನ್ನು ಸಹ ಹೇಳಿದರು. ನಾನು ತಮಗೆ ಹೇಳುತ್ತೇನೆ ತಮಗಿಂತಲೂ ಕೂಡ ಮಾನ್ಯ ಗೋಪಾಲ ಗೌಡರನ್ನು ಹೆಚ್ಚು ಆರಾದನೆ ಮಾಡತಕ್ಕವರು ಈ ಸದನದಲ್ಲಿ ಮತ್ತೊಬ್ಬರು ಇಲ್ಲ ದಯಮಾಡಿ ಗೋಪಾಲ ಗೌಡರನ್ನು ಅನುಸರಿಸಬೇಕು ಎಂದು ನಾನು ತಮ್ಮನ್ನು ಈ ಸ್ಥಾನದಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ವಿನಾಕಾರಣ ನಿರಪರಾಧಿಗೆ ತಾವು ಶಿಕ್ಷೆ ಕೊಡಿಸುತ್ತಿದ್ದೀರಿ. ನಾನು ಒಬ್ಬ ನಿರಪರಾಧಿ. ಈ ವಿಚಾರದಲ್ಲಿ ಏಕೆ ನಾಳೆ ಭಾಷಣ ಮಾಡುವವರೆಲ್ಲ ರಾಜ್ಯಪಾಲರ ಭಾಷಣಕ್ಕೆ ಕೈ ಮುಗಿಯುತ್ತಾರೇನು? ಇಲ್ಲಿ ತಾವು ಹೇಳಿ.

ಅಧಯ್ಷರು : ಇಂತಹದೇ ಸನ್ನಿವೇಶದಲ್ಲಿ ಗೋಪಾಲ ಗೌಡರು, ನೀವು ಗೋಪಾಲಗೌಡರನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಮಾತ್ರ ಹೇಳಿದಿರಿ. ಗೋಪಾಲ ಗೌಡರಿಂದ ಮುಂದೆ ಏನು ಆಯಿತು ಎಂಬುದನ್ನು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸಂದರ್ಭಗಳು.....

ಅಧ್ಯಕ್ಷರು : ಮಾನ್ಯ ಸಭಾ ನಾಯಕರು ಮಾತನಾಡುತ್ತಾರೆ.

+ಶ್ರೀ ಎಚ್.ಡಿ. ದೇವೇಗೌಡ : ಸನ್ಮಾನ್ಯ ಸಭಾಧ್ಯಕ್ಷರೆ, ಈ ಸಭೆಯ ಮುಂದೆ ಇರತಕ್ಕ ಒಂದು ಹಕ್ಕು ಚ್ಯುತಿ ನಿರ್ಣಯವನ್ನು ಶ್ರೀಮಾನ್ ಕೆ.ಎನ್. ನಾಗೇಗೌಡರು ಮತ್ತು ಸಂಗಡಿಗರು ತಂದಿದ್ದಾರೆ. ಇದರ ಬಗ್ಗೆ ಸಾಕಷ್ಟು ಈ ಸದನದಲ್ಲಿ ಅನೇಕ ಜನ ಹಿರಿಯ ಮುಖಂಡರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ವೀರಪ್ಪ ಮೊಯಿಲಿ ಅವರು ಇಂತಹ ಸೂಕ್ಷ್ಮವಾದ ವಿಷಯದಲ್ಲಿ ಈ ಸ್ವರೂಪದಲ್ಲಿ ಈ ಒಂದು ಹಕ್ಕುಚ್ಯುತಿ ನಿರ್ಣಯವನ್ನು ತರಬಾರದಿತ್ತು. ಮಾನ್ಯ ಸಭಾಧ್ಯಕ್ಷರೇ ಇದರ ಬಗ್ಗೆ ತಮ್ಮ ಒಂದು ಸೂಚನೆಯನ್ನು ಮಂಡಿಸಬಹುದಿತ್ತು ಎನ್ನುವ ಒಂದು ಅಭಿಪ್ರಾಯವನ್ನು ಹೇಳಿದ್ದಾರೆ. ಶ್ರೀಮಾನ್ ಎಚ್.ಎನ್. ನಂಜೇಗೌಡ ಅವರು ಮಾತನಾಡುವಾಗ ಈ ತರಹ ಘಟನೆಗಳಿಗೆ ಒಂದು ಸತ್ಸಂಪ್ರದಾಯ ಹಾಕುವುದು ಎನ್ನುವ ಮಾತನ್ನು ಕೂಡ ಅವರು ಹೇಳಿದ್ದಾರೆ. ಮಾನ್ಯ ವಾಟಾಳ್‌ನಾಗರಾಜ್ ಅವರು ಭಾಷಣ ಮಾಡುವಾಗ ಹೇಳಿದರು. ಅವರೇನು ಈ ಸದನಕ್ಕೆ ಹೊಸಬರಲ್ಲ. ಅವರು ಹೇಳಿದ್ದೆಲ್ಲಾ ನಾನು ಕೇಳಿದ್ದೇನೆ. ಈ ಸದನದ ಇತಿಹಾಸದಲ್ಲಿ ರಾಜ್ಯಪಾಲರ ಭಾಷಣವನ್ನು ಹರಿದಂತಹ, ಎಸೆದು ತುಳಿದು ಹಾಕಿರುವಂತಹದು ಎರಡೇ ಬಾರಿ ಎಂದು ನನಗೆ ಗೊತ್ತಿದ್ದ ಹಾಗೆ. ಒಂದು ಶ್ರೀಮಾನ್ ಗೋಪಾಲಗೌಡರು ಮಾಡಿದ್ದುದು, ಎರಡನೆಯದು ನಿನ್ನೆ ನಡೆದಿರತಕ್ಕ ಘಟನೆ. ಬಹುಶಃ ಇಲ್ಲಿಯವರೆಗೆ ಈ ಸದನದಲ್ಲಿ ನಾನು ಈ ಸದನಕ್ಕೆ ಐದು ವರ್ಷ ಬರಲಿಕ್ಕೆ ಅವಕಾಶ ಇರಲಿಲ್ಲ. 1989ರಿಂದ

1994ರವರೆಗೆ. 1962ರಿಂದ ಈ ಸಂದರ್ಭದಲ್ಲಿ ನಾವು ಇಲ್ಲಿ ಕುಳಿತುಕೊಡಿದ್ದೇವೆ. ಅದಕ್ಕಿಂತ ಮುಂಚಿನದು ನನಗೆ ಗೊತ್ತಿಲ್ಲ, ಕಡತದಲ್ಲಿ ನೋಡಬೇಕು. 1962 ರಿಂದ ಅದಕ್ಕಿಂತ ಮುಂಚಿನದು ನನಗೆ ಗೊತ್ತಿಲ್ಲ, ಕಡತದಲ್ಲಿ ನೋಡಬೇಕು. 1962 ರಿಂದ 1995ರವರೆಗೆ ಇಂತಹ ಘಟನೆಗಳು ನಡೆದಿದ್ದು ಎರಡೇ ಸಾರಿ. ಒಂದು ದಿವಂಗತ ಗೋಪಾಲ ಗೌಡರು ರಾಜ್ಯಪಾಲರ ಭಾಷಣವನ್ನು ಹರಿದು ತುಳಿದು ಹೊರಗಡೆ ಹೋದರು. ಅದೇ ಘಟನೆ ನಿನ್ನೆ ನಡೆದಿದೆ. ನಾನು ಅದರ ಬಗ್ಗೆ ವ್ಯಾಖ್ಯಾನ ಮಾಡಲಿಕ್ಕೆ ಹೋಗುವುದಿಲ್ಲ. ಅಷ್ಟೇ ಅಲ್ಲ ಪರ್ಯಾಯ ಭಾಷಣ ಮಾಡುವುದಕ್ಕೆ ಕೂಡ ಪ್ರಯತ್ನ ಮಾಡಿದರು. ಬಹುಶಃ ಪರ್ಯಾಯ ಭಾಷಣ ಮಾಡಿದಂತಹದು ನನಗೆ ಗೊತ್ತಿಲ್ಲ. ಈಗ ಅವರು ಏನು ಓದುತ್ತಿದ್ದಾರೆ, ನಿನ್ನೆ ಏನು ಓದಿದರು ನನಗೆ ಗೊತ್ತಿಲ್ಲ. ಅಂತೂ 15-20 ನಿಮಿಷ ಭಾಷಣ ಮಾಡಿದರು ನಮ್ಮ ವ್ಯವಸ್ಥೆಯಲ್ಲಿ ಇದೇನು ಎಲ್ಲರಿಗೂ ಹೊಸದು ಅಲ್ಲ. ಈ ದೇಶದಲ್ಲಿ ನಮ್ಮ ರಾಜ್ಯಾಂಗ ಇರಬಹುದು, ಕಾರ್ಯಾಂಗ ಇರಬಹುದು ಅಥವಾ ಶಾಸಕಾಂಗ ಇರಬಹುದು, ಕೆಲವು ಇತಿಮಿತಿಗಳು ಇದ್ದಾವೆ. ಈ ಸದನದ ಘನತೆ ಗೌರವವನ್ನು ಕಾಪಾಡತಕ್ಕದ್ದರಲ್ಲಿ ಯಾವುದೇ ಒಂದು ಕಡೆ, ಒಂದು ಭಾಗದವರಿಗೆ ಮೀಸಲಾತಿ ಅಲ್ಲ.

4.10 ಪಿ.ಎಂ.

ಸದನದಲ್ಲಿರುವ ಎಲ್ಲಾ ಪಕ್ಷದ ಸದಸ್ಯರುಗಳು ಸೇರಿ ಸದನದ ಘನತೆ-ಗೌರವವನ್ನು ಕಾಪಾಡತಕ್ಕಂಥ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ, ನಿಮ್ಮಲ್ಲಿರುವ ಯಾರ ಮೇಲೂ ಕೂಡ ವೈಯಕ್ತಿಕ ದ್ವೇಷ ಸಾಧಿಸುವ ಪ್ರಶ್ನೆಯೇ ಇಲ್ಲ. ನಾನು ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅವರು ಮಾತನಾಡುವಾಗ ಇನ್ನೊಂದು ಮಾತನ್ನು ಹೇಳಿದರು. ಏನೆಂದರೆ, ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆ ಕೊಟ್ಟಿದ್ದು, ಅದರಿಂದ ಪಾರಾಗುವುದಕ್ಕೆ ಇದನ್ನು ತಂದಿದ್ದಾರೆಂದು, ಇದರಲ್ಲಿ ಪಾರಾಗಬೇಕಾದದ್ದು ಏನೂ ಇಲ್ಲ. ಇದರ ಬಗ್ಗೆ ನಾನು ಅಧ್ಯಕ್ಷರಿಗೆ ಈಗಾಗಲೇ ನನ್ನ ಭಾವನೆ ಏನೆಂಬುದನ್ನು ವ್ಯಕ್ತಪಡಿಸಿದ್ದೇನೆ. ಬೇಕಾದರೆ ಈ ಕುರಿತು ಮುಕ್ತವಾಗಿ ಚರ್ಚೆ ಮಾಡೋಣ. ಆದರೆ, ನಿಲುವಳಿ ಸೂಚನೆ ವ್ಯಾಪ್ತಿಯಲ್ಲಿ ಇದು ಬರಲು ಅವಕಾಶವಿಲ್ಲ. ಸದನದ ನಿಯಮಾವಳಿಯಲ್ಲಿ ಯಾವುದಾದರೊಂದು ರೂಪದಲ್ಲಿ ತರಬಹುದೆಂದು ನನ್ನ ಅಭಿಪ್ರಾಯ ತಿಳಿಸುತ್ತಿದ್ದೇನೆ. ಅವರು ಎತ್ತಿದ್ದರಿಂದ ಹೇಳುತ್ತಿದ್ದೇನೆ.....

ಅಧ್ಯಕ್ಷರು : ಅಧ್ಯಕ್ಷರನ್ನು ಯಾರೂ ನಿಯಂತ್ರಿಸುವುದಕ್ಕೆ ಸಾಧ್ಯವಿಲ್ಲ. ಸೂಚನೆ ಕೊಟ್ಟಿರತಕ್ಕವರು ನೀವು ಹಾಗೆ ತೆಗೆದುಕೊಳ್ಳಬೇಕೆಂದು ನನ್ನ ಕಛೇರಿಯಲ್ಲಿ ಕೇಳುವ ಹಕ್ಕು ನಿಮಗಿರುತ್ತದೆ, ಅಲ್ಲದೆ, ತಮ್ಮ ಅಭಿಪ್ರಾಯವನ್ನು ಮಂಡಿಸುವ ಹಕ್ಕೂ ಇರುತ್ತದೆ. ನನ್ನನ್ನು ನೀವುಗಳು ನಿಮ್ಮಿಷ್ಟಕ್ಕೆ ನಡೆಸಿ ಮತ್ತು ಯಾರಾದರೂ ನಿಯಂತ್ರಿಸಬೇಕೆಂಬುದರ ಬಗ್ಗೆ ಕಲ್ಪನೆ, ಅಭಿಪ್ರಾಯವಿದ್ದರೆ ದಯಮಾಡಿ ಅದನ್ನು ತೆಗೆದುಹಾಕಿರಿ. ನಾನು ಅದಕ್ಕೆ ತಯಾರಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ, ಇದನ್ನು ಓವರ್‌ಕಮ್ ಮಾಡುವುದಕ್ಕೆ ತಂದಿದ್ದಾರೆಂದು ಹೇಳಿದರು. ಆ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ನಾನು ಹೋಗುವುದಿಲ್ಲ. ಈ ಸದನದಲ್ಲಿ ಬೆಳಿಗ್ಗೆ ನಿಲುವಳಿ ಸೂಚನೆ ಏನಿತ್ತು, ಅದನ್ನು ಓವರ್‌ಕಮ್ ಮಾಡುವುದಕ್ಕೆ ಇದನ್ನು ತಂದಿದ್ದಾರೆಂದು ಅದರ ಪ್ರತಿಯನ್ನು ಕಳುಹಿಸಿದ್ದೀರಿ, ಇದು ನನಗೆ ತಿಳಿಯದ ವಿಷಯವೇನಲ್ಲ. ತಾವೇ ಇದನ್ನು ಕಳುಹಿಸಿಕೊಟ್ಟಿದ್ದು, ಸದರಿ ವಿಷಯ ಚರ್ಚೆಗೆ ತೆಗೆದುಕೊಳ್ಳುವುದರಿಂದ ತಾವು ಸಿದ್ಧವಾಗಿರಬೇಕೆಂದು ಹೇಳಿದ್ದೀರಿ. ಮತ್ತು ನಾನು

ಅಧ್ಯಕ್ಷರಿಗೆ ಹೇಳಿರುವಂತೆ ವಿಷಯ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬುದೇ ನನ್ನ ಅಭಿಪ್ರಾಯ.

ಈ ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಚರ್ಚೆಯಾದರೂ ಬೇಡ ಎನ್ನುವುದಿಲ್ಲ. ನಿನ್ನೆ ನಡೆದ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲೂ ಸಹ ಮಾತನಾಡುತ್ತಾ ಸದನದಲ್ಲಿ ಯಾವುದೇ ಚರ್ಚೆಯನ್ನು ಮೊಟಕುಗೊಳಿಸುವುದಕ್ಕೆ ಸರ್ಕಾರ ಸಿದ್ಧವಿಲ್ಲವೆಂದು ಹೇಳಿದ್ದೇನೆ. ವಿಷಯದ ಅನುಕೂಲ ಮತ್ತು ಅನಾನುಕೂಲತೆಗಳ ಬಗ್ಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ. ನನ್ನ ಅಭಿಪ್ರಾಯ ಹೇಳುವಾಗ ಸದರಿ ವಿಷಯದಲ್ಲಿ ನಾವು ಸದನದಲ್ಲಿ ಚರ್ಚೆಗೆ ಅವಕಾಶ ಕೊಡದ ರೀತಿಯಲ್ಲಿ ಇದಕ್ಕೆ ಅಡ್ಡಗಾಲು ಹಾಕಿದ್ದಾರೆ ಎನ್ನುವ ರೀತಿ ಭಾವನೆ ಬರುವುದು ಬೇಕಾಗಿಲ್ಲವೆಂದು ಹೇಳಿದ್ದೇನೆ ಈ ವಿಷಯವನ್ನು ಅಷ್ಟೆಕ್ಕೆ ನಿಲ್ಲಿಸಿ, ಅಧ್ಯಕ್ಷರು ಈ ಕುರಿತು ಏನು ತೀರ್ಪು ಕೊಡುತ್ತಾರೋ, ಅದಕ್ಕೆ ನಾವು ತಲೆಬಾಗುತ್ತೇವೆ, ಇದರಲ್ಲಿ ತಕರಾರೇನೂ ಇಲ್ಲ. ಆದರೆ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಸನ್ಮಾನ್ಯ ರಾಜ್ಯಪಾಲರಿಗೆ ಹಾಗೂ ಯಾವುದೇ ಪಕ್ಷ ಸರ್ಕಾರ ನಡೆಸಿದರೂ ಕೂಡ ನಮ್ಮ ರಾಜ್ಯಾಂಗದ ಚೌಕಟ್ಟಿನೊಳಗೆ ವರ್ಷದ ಪ್ರಾರಂಭದಲ್ಲಿ ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ತಮ್ಮ ಭಾಷಣ ಮಾಡತಕ್ಕಂಥಾದ್ದು ಅವರ ಹೊಣೆಗಾರಿಕೆಯಾಗಿರುತ್ತದೆ. ಇಲ್ಲಿ ಈ ಕಡೆ ನಾವು ಕುಳಿತುಕೊಂಡಿದ್ದರೂ ಅಷ್ಟೆ, ನಾಳೆ ದಿವಸ ವಾಟಾಳ್ ನಾಗರಾಜ್‌ರವರು ಕುಳಿತುಕೊಂಡರೂ ಅಷ್ಟೆ, ರಾಜ್ಯಪಾಲರು ತಮ್ಮ ಕರ್ತವ್ಯ ನಿರ್ವಹಣೆ ಮಾಡುತ್ತಾರೆ. ಅವರು ತಮ್ಮ ಭಾಷಣವನ್ನ್ ಸ್ವತಃ ರಾಜಭವನದಲ್ಲಿ ಕುಳಿತು ಬರೆದುಕೊಂಡು ಬರುವುದಿಲ್ಲ. ಸರ್ಕಾರ ತನ್ನ ನೀತಿ-ನಿಲುವು ಮತ್ತು ಅಭಿಪ್ರಾಯವನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸಿಕೊಟ್ಟಾಗ, ರಾಜ್ಯಪಾಲರು ಅದಕ್ಕೆ ಒಪ್ಪಿ ಅವರು ಇಲ್ಲಿ ಬಂದು ತಮ್ಮ ಭಾಷಣ ಮಾಡತಕ್ಕಂಥ ಅವಕಾಶವನ್ನು ರಾಜ್ಯಾಂಗವನ್ನು ನಿರೂಪಿಸಿರುವವರು ಮೊದಲಿನಿಂದಲೂ ರಾಜ್ಯಾಂಗದ ಚೌಕಟ್ಟಿನಲ್ಲಿ ರಾಜ್ಯಪಾಲರಿಗೆ ಕಲ್ಪಿಸಿಕೊಟ್ಟಿದ್ದಾರೆ. ಅದನ್ನು ವಿರೋಧಿಸುವುದು ಬೇಡವೆಂದು ಯಾರೂ ಹೇಳುವುದಿಲ್ಲ. ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ಹೇಳಿಲ್ಲ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳುವಾಗ ತಮಗಿರತಕ್ಕಂಥ ಎಲ್ಲಾ ಶಕ್ತಿಯನ್ನು ಬಳಸಿಕೊಂಡು, ತೀವ್ರವಾದ, ಕಠಿಣವಾದ ಶಬ್ದಗಳನ್ನು ಪ್ರಯೋಗಿಸಿ ಮತ್ತು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನಲ್ಲಿ ಏನೆಲ್ಲಾ ಪದಗಳನ್ನು ಬಳಸಲು ಸಾಧ್ಯವಿದೆಯೋ ಎಲ್ಲಾ ಶಬ್ಧಗಳನ್ನು ಪ್ರಯೋಗ ಮಾಡಿ ರಾಜ್ಯಪಾಲರ ಭಾಷಣವನ್ನು ತಿರಸ್ಕರಿಸುವ ಅಧಿಕಾರವಿದೆ. ಈ ಸದನಕ್ಕೆ ಆ ಅಧಿಕಾರವಿಲ್ಲವೆಂದು ನಾನು ಕೇಳಿಲ್ಲ. ಇಂದು ರಾಜ್ಯಪಾಲರ ಭಾಷಣವಾಗಿ ನಾಳೆ ಬೆಳಿಗ್ಗೆ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸಲು ಭಾಷಣ ಮಾಡುವಾಗ ತಾವುಗಳೆಲ್ಲರೂ ಅದನ್ನು ಮೆಚ್ಚಿಕೊಳ್ಳಬೇಕೆಂದು ನಾವು ಅಪೇಕ್ಷಿಸುವುದು ಸಹಜವಲ್ಲ, ಅದು ವಸ್ತುಸ್ಥಿತಿಗೆ ವಿರೋಧವಾಗುತ್ತದೆ; ನಿಮ್ಮ ಕರ್ತವ್ಯ ಮಾಡಲು ಅಡ್ಡಿಪಡಿಸಲು ನಾವ್ಯಾರು? ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದಿಷ್ಟೆ: ನಿನ್ನೆ ರಾಜ್ಯಪಾಲರು ತಮ್ಮ ಭಾಷಣ ಮಾಡುವಾಗ ನಿಮ್ಮ ಮನಸ್ಸಿನಲ್ಲಿ ಯಾವ ರೀತಿಯ ಆಕ್ರೋಶವಿತ್ತೋ, ಇವೊತ್ತು ಎಷ್ಟು ಬೇಕಾದರೂ ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ತರಾಟೆಗೆ ತೆಗೆದುಕೊಳ್ಳುವ ಶಕ್ತಿ ಇದೆ. ಶಾಸನಸಭೆ ಇತಿಹಾಸದಲ್ಲಿ ನಿನ್ನೆ ನಡೆದ ಘಟನೆಯಂತೆಯೇ ಅನೇಕ ಸಾರಿ ಅಂತಹ ಘಟನೆಗಳು ಸದನದೊಳಗೆ ನಡೆದಿದೆ. ಹಾಗೆಯೇ ಎಂ.ಇ.ಎಸ್. ಸದಸ್ಯರುಗಳು ತಮ್ಮ ನಿಲುವನ್ನು ಪ್ರತಿಪಾದನೆ ಮಾಡಿ, ಪ್ರತಿಭಟಿಸಿ ಹೊರ ಹೋಗುವ ವಿಷಯ ಹೊಸದೇನಲ್ಲ, ಇದನ್ನು ನಾನು ಕಳೆದ ಮೂವತ್ತು ವರ್ಷಗಳಿಂದ ನೋಡುತ್ತಿದ್ದೇನೆ. ಅದೇ ರೀತಿ ಶ್ರೀ ಸುಂಕನ್‌ಕರ್ ಅವರಿಥ ಕಾಲದಲ್ಲಿ ಅವರು ರಾಜ್ಯಪಾಲರ ಭಾಷಣದ ಮೇಲೆ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿ ಸದನದಿಂದ ಹೊರಗೆ ಹೋಗಿದ್ದನ್ನು ನೋಡಿದ್ದೇನೆ.

ನಾನು ಆ ವಿಷಯವನ್ನು ಅಷ್ಟಕ್ಕೆ ಸೀಮಿತಗೊಳಿಸುತ್ತೇನೆ. ನಿನ್ನೆ ನಡೆದಂಥ ಘಟನೆ ಬಹಳ ದುಃಖಕರವಾಗಿತ್ತೆಂದು ತಿಳಿಸುತ್ತಾ ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನಾನು ಲೋಕಸಭಾ ಸದಸ್ಯನಾಗಿದ್ದಾಗ ಅಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಅತ್ಯಂತ ಎತ್ತರಕ್ಕೆ ಬೆಳೆದಂಥ ಸಂಸದೀಯ ಪಟು. ಕಳೆದ 1991ನೇ ಸಾಲಿನ ಲೋಕಸಭೆಯಲ್ಲಿ ಅವರು ರಾಷ್ಟ್ರಾಧ್ಯಕ್ಷರ ನಿರ್ಣಯವನ್ನು ತಿರಸ್ಕರಿಸಬೇಕೆಂಬುದರ ಬಗ್ಗೆ ಒಂದು ಕಟ್ ಮೋಷನ್ ಅನ್ನು ಮೂವ್ ಮಾಡಿದರು, ಅದನ್ನು ಡಿಫೀಟ್ ಮಾಡಬೇಕೆಂದು ಹೋರಾಟ ನಡೆಯಿತು, ಸಾಧ್ಯವಾಗಲಿಲ್ಲ. ಕೊನೆಗೆ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಹೇಳಿರುವ ಮಾತುಗಳ ನಡವಳಿಕೆ ನನ್ನ ಹತ್ತಿರವಿದೆ. ಅವರು ಮುತ್ತಿನಂಥ ಮಾತನ್ನು ಹೇಳಿದರು. ಏನೆಂದರೆ, ಎಂತಹ ಕಠಿಣ ಪರಿಸ್ಥಿತಿ ಬಂದರೂ, ಎಂತಹ ರಾಜಕೀಯ ಬಿಕ್ಕಟ್ಟು ಉಂಟಾದರೂ ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಇಂತಹ ಘಟನೆ ನಡೆಯಬಾರದಾಗಿತ್ತು, ಇದು ನನಗೆ ನಿಜಕ್ಕೂ ದುಃಖವಾಗಿದೆ ಎಂದು ಲೋಕಸಭೆಯಲ್ಲಿ ಹೇಳಿದರು. ಆದರೂ ಅದು ಡಿಫೀಟ್ ಆಗಲಿಲ್ಲ. ಮತ್ತು ಅವರು ತಮ್ಮ ಮಾತನ್ನು ಮುಂದುವರೆಸುತ್ತಾ 'ಇದರಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ, ಇದಕ್ಕೆ ಈ ದೇಶದಲ್ಲಿ ಅಂತಿಮ ತೆರೆ ಎಳೆಯುವುದು ಅವಶ್ಯಕ, ಇದರ ಬಗ್ಗೆ ಕೋಡ್ ಆಫ್ ಕಂಡಕ್ಟ್‌ನ್ನು ಎಲ್ಲಾ ಪಕ್ಷದವರು ಸೇರಿ ಮಾಡಬೇಕು' ಎಂದರು. ಇವೊತ್ತು ಸದನದ ಗೌರವ ಕಾಪಾಡತಕ್ಕಂಥಾದ್ದು ಕೇವಲ ಯಾರದೋ ಪ್ರತಿಷ್ಠೆಯ ಪ್ರಶ್ನೆಯಲ್ಲ, ಸದನದ ಘನತೆ-ಗೌರವಗಳನ್ನು ಉಳಿಸಿಕೊಳ್ಳತಕ್ಕಂಥ ಕಾಲದಲ್ಲಿ ಒಟ್ಟಾಗಿ ಸೇರಿ ನಾವೆಲ್ಲರೂ ಕೆಲಸ ಮಾಡಬೇಕು. ಅಧ್ಯಕ್ಷರು ಈ ಕುರಿತು ಕೊಡುವ ತೀರ್ಮಾನಕ್ಕೆ ತಲೆಬಾಗುತ್ತೇವೆ ಇದರಲ್ಲಿ ನಿಮ್ಮೊಬ್ಬರನ್ನೇ ಇಕ್ಕಟ್ಟಿಗೆ ಸಿಲುಕಿಸುವುದಕ್ಕೆ ನಾನು ಹೋಗುವುದಿಲ್ಲ. ಶ್ರೀಮಾನ್ ನಂಜೇಗೌಡರು ಬೆಳಿಗ್ಗೆ ಮಾತನಾಡುವಾಗ ಹೇಳಿದರು. ಅವರಿಗೆ ಸಾಕಷ್ಟು ಅನುಭವವಿದೆ. ಇಂತಹ ಸನ್ನಿವೇಶವನ್ನು ಕೊನೆ ಮಾಡಿ ನಾವು ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು. ತಾವು ಇಡೀ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯಾವುದೇ ನಿರ್ಣಯ, ತೀರ್ಮಾನ ಮಾಡಿದರೂ ನನ್ನದೇನೂ ಆಕ್ಷೇಪಣೆಯಿಲ್ಲ. ನಾನು ತಮ್ಮಲ್ಲಿ ಕೈ ಮುಗಿದು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸದನದ ಗೌರವವನ್ನು ಎತ್ತಿ ಹಿಡಿಯುವಾಗ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾತನಾಡುವಾಗ ಅವರು ತಮ್ಮ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ನಮ್ಮ ಮನಸ್ಸಿನಲ್ಲಿ ಎಷ್ಟೇ ಆಕ್ರೋಶವಿದ್ದರೂ ಅವರಿಗೆ ಅಗೌರವ ತೋರಿಸತಕ್ಕಂಥಾದ್ದು, ಅದಕ್ಕೆ ಕಡಿವಾಣ ಹಾಕತಕ್ಕಂಥಾದ್ದಕ್ಕೆ ನಾನು ಯಾರು? ಯಾವ ರೀತಿ ಸದನದ ಕಾರ್ಯಕಲಾಪ ನಡೆಯಬೇಕು ಎನ್ನುವುದರ ಬಗ್ಗೆ ನೀವುಗಳೆಲ್ಲರೂ ಸಹಕರಿಸಿ, ಸದನದ ಘನತೆ-ಗೌರವಗಳನ್ನು ಎತ್ತಿ ಹಿಡಿಯುವುದಕ್ಕೆ ಪ್ರಯತ್ನ ಮಾಡಿದರೆ ಇಡೀ ಸದನದಲ್ಲಿರುವ 224ಸದಸ್ಯರಿಗೂ ನಾನು ಋಣಿಯಾಗಿರುತ್ತೇನೆ. ಸದನದ ಪ್ರತಿಷ್ಠೆ, ಘನತೆ, ವರ್ಚಸ್ಸನ್ನು ಇನ್ನಷ್ಟು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡೋಣವೆಂದು ತಮ್ಮಲ್ಲಿ ವಿನಂತಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI B.I. PATIL (Uchgaon) : Mr. Speaker Sir, for the last 39 years, Marathi speaking people of Belgaum and other borddder areas are sending their representatives to express their voice, andd aspirations on thee floor of this House. This is the only forum available to us where we can effectively highlight the problems of our people and geet justice.

MR. SPEAKER :This is regarding your conduct in this House when his Excellency the Governor of Karnataka addressed the Joint Session. Do you

express reegrets? It you do not express regrets that is a different thing. If you do not express regrets, you leave it to me. I will deal with it.

(INTERRUPTIONS)

MR. SPEAKER : I am not willing to waste the precious time of the House.

SRI B.I. PATIL : Sir, yesterday you have heard us. We have only shouted slogans. We did not do anything more than that. I only request you to allow us to speak for 2 minutes. It is our constitutional right to raise any problem of our people. It is absolutely not our intention to obstruct people. It is absolutely not our intention to obstruct during the speech of Hi Excellency. However, the Hon'ble Governor is the Constitutional Head and supreme authority of the state. When the Government of Karnataka for the lassst 39 years keeping silent wilfully over this problem causing injustice to our Marathi people and when it does not intervene or take initiative to solve this boundary dispute as per the wishes of the majority of the Marathi people living in the disputed areas for merger of Belgaum and other parts into Maharashtra, it is our bounden duty to bring it to the notice of the Governor. As the people of Karnataka are fighting to get back the Kasargod, on the same analogy, we are fighting for merger of Belgaum and other parts into Maharashtra. We will continue to fight for it.

ಅಧ್ಯಕ್ಷರು : ಏದಾವುದೂ ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸಾಧ್ಯವಿಲ್ಲ. ಎಂಇಎಸ್‌ನವರು ಇಲ್ಲಿ ರಾಜಕೀಯ ಮಾಡುವುದು ಬೇಡ.

ಅಧ್ಯಕ್ಷರು : ಸನ್ಮಾನ್ಯ ನಾಗೇಗೌಡರು ಕೊಟ್ಟಿರುವ ಸೂಚನೆಯ ಮೇಲೆ ಎಲ್ಲರೂ ಸವಿಸ್ತಾರವಾಗಿ ಮಾತನಾಡಿದ್ದೀರಿ. ಹಿರಿಯ ಸದಸ್ಯರಾದ ಸನ್ಮಾನ್ಯ ನಾಗರಾಜ್‌ರವರಲ್ಲಿ ಇಂಥಹದ್ದೆ ಸನ್ನಿವೇಶದಲ್ಲಿ ಮಾನ್ಯ ಗೋಪಾಲಗೌಡರು ಕಡೆಗೆ ಏನು ಮಾಡಿದರು ಅದನ್ನು ಅನುಸರಿಸಬೇಕೆಂದು ನಾನೂ ಸಹ ಮನವಿ ಮಾಡಿಕೊಂಡೆ. ಆದರೆ ಅವರು ಅದನ್ನು ಅರ್ಧಕ್ಕೆ ಅನುಸರಿಸಿ ಅರ್ಧವನ್ನು ಬಿಟ್ಟುಬಿಟ್ಟಿದ್ದಾರೆ. ಆದರೆ ಅವರು ಗೋಪಾಲಗೌಡರದನ್ನು ಪೂರ್ಣವಾಗಿ ಅನುಸರಿಸಿದ್ದರೆ ನಮಗೆ ಪರಿಹಾರ ಸುಲಭವಾಗಿ ದೊರೆಯುತ್ತಿತ್ತು ಎಂದು ನೋವಿನಿಂದ ಹೇಳಬೇಕಾಗಿದೆ. ಈಗ ನನ್ನ ಅಧಿಕಾರವನ್ನು ಉಪಯೋಗಿಸಿ ಹಿಂದಿನ ಸಭಾಧ್ಯಕ್ಷರುಗಳು ಇಂಥ ಸನ್ನಿವೇಶಗಳಲ್ಲಿ ಏನು ಮಾಡಿದ್ದಾರೋ ಅದೇ ರೀತಿಯಲ್ಲಿ ಇದರ ಬಗ್ಗೆ ವಿಶೇಷವಾದ ಸಮಿತಿಯನ್ನು ನೇಮಕ ಮಾಡಲಿದ್ದೇನೆ. ಆ ಸಮಿತಿಯ ವ್ಯಾಪ್ತಿಗೆ ಒಳಪಟ್ಟು ಇಲ್ಲಿ ವಿವರಣೆಗಳನ್ನು ಕೂಡ ಅವರು ಪಡೆದುಕೊಂಡು ಮುಂದಿನ ಕ್ರಮವನ್ನು ಜರುಗಿಸಲು ವ್ಯವಸ್ಥೆ ಮಾಡುತ್ತೇನೆ. ಆ

ಸಮಿತಿಯನ್ನು ನಂತರ ಪ್ರಕಟಣೆ ಮಾಡುತ್ತೇನೆ. ಈಗ ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ.

ನಿಲುವಳಿ ಸೂಚನೆಗಳು

1. ಹುಬ್ಬಳ್ಳಿಯಲ್ಲಿ ಹೋಳಿ ಹಬ್ಬವು ನಡೆದಿರತಕ್ಕ ಸಂದರ್ಭದಲ್ಲಿ ಇಬ್ಬರು ಅಮಾಯಕರು ಸತ್ತಿರುವುದು.

+ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ತಾವು ಅನುಮತಿಯನ್ನು ಕೊಡುವುದಾದರೆ ಬಹಳ ಮುಖ್ಯವಾಗಿರುವ ವಿಚಾರವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಹುಬ್ಬಳ್ಳಿಯಲ್ಲಿ ಇವತ್ತು ಹೋಳಿಹಬ್ಬವು ನಡೆದಿರತಕ್ಕ ಸಂದರ್ಭದಲ್ಲಿ ಘರ್ಷಣೆಯಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಇವರಿಗೆ ಬರೀ ಇದೇ ಆಯಿತು. ಇವರಿಂದ ದೇಶ ನಾಶವಾಯಿತು. ಬರೀ ಹುಬ್ಬಳ್ಳಿಯ ವಿಚಾರವನ್ನೆ ಹೇಳುತ್ತಾರೆ.

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೆ ದಯಮಾಡಿ ಕೇಳಿ, ವಿರೋಧ ಪಕ್ಷದ ನಾಯಕರಿಗೆ ಈ ಸದನದಲ್ಲಿ ವಿಶಿಷ್ಟವಾದ ಸ್ಥಾನವಿದೆ. ದಯಮಾಡಿ ಕುಳಿತುಕೊಳ್ಳಿ. ಅವರು ನನ್ನ ಅನುಮತಿಯನ್ನು ಪಡೆದುಕೊಂಡು ಅವರ ಅಭಿಪ್ರಾಯವನ್ನು ವ್ಯಕ್ತ ಮಾಡಲು ನಿಂತುಕೊಂಡಿರುವಾಗ ತಾವು ಆ ರೀತಿ ಮಾತನಾಡತಕ್ಕದ್ದು ಸರಿಯಲ್ಲ. ನೀವು ಮಾತನಾಡತಕ್ಕ ಅವಶ್ಯಕತೆ ಇದ್ದರೆ ಅಗತ್ಯ ಬಿದ್ದಾಗ ತಮಗೂ ಸಹ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ವಿರೋಧಪಕ್ಷದ ನಾಯಕರ ಸ್ಥಾನವೇನಿದೆ ಅದನ್ನು ಆ ರೀತಿ ನೋಡತಕ್ಕದ್ದು ಈ ಸದನಕ್ಕೆ ಗೌರವ ತರತಕ್ಕದ್ದಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ತಿಳಿದಿರುವಂತೆ ನಾವು ಈಗ ನಿಲುವಳಿ ಸೂಚನೆಯನ್ನು ಮಂಡಿಸುತ್ತಿದ್ದೇವೆ.

MR. SPEAKER : He is just mentioning it. It is not being discussed.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಅನಂತರ ಅವಕಾಶ ಮಾಡಿಕೊಡಬಹುದು. ಅವರು ಹೇಳುತ್ತಿರುವುದು ಇದಕ್ಕೆ ಸಂಬಂಧಪಡುವುದಿಲ್ಲ. ಕಾನೂನು ಸುವ್ಯವಸ್ಥೆಯ ಬಗ್ಗೆ ವಿಚಾರ ಮಾಡಿದಾಗ ಅವರು ಸಹ ಮಾತನಾಡಬಹುದು.

MR. SPEAKER : I will hear him for two minutes. I am coming to it.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನನ್ನ ಕರ್ತವ್ಯವನ್ನು ಮಾಡಲು ನಿಂತಿದ್ದೇನೆ. ತಾವು ಅದಕ್ಕೆ ಅಪ್ಪಣೆಯನ್ನು ಕೊಟ್ಟಿದ್ದೀರಿ. ಅದು ಸರಿಯಿಲ್ಲವೆಂದರೆ ಕಡತದಿಂದ ತೆಗೆಸಿ ಹಾಕಿ. ಹುಬ್ಬಳ್ಳಿಯಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ಘರ್ಷಣೆಯಾಗಿದೆ. ಇಬ್ಬರು ಅಮಾಯಕರು ಸತ್ತಿದ್ದಾರೆ. ಮೂವತ್ತು ಜನರು ಗಾಯಗೊಂಡು ಕೆಎಂಸಿ ಆಸ್ಪತ್ರೆಗೆ ಸೇರಿದ್ದಾರೆ. ಗೃಹಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆಂದು ಸುದ್ದಿ ಇದೆ. ಕಾನೂನು ಸುವ್ಯವಸ್ಥೆಯು ತೊಂದರೆಯಾಗಿದೆ, ಏನು ಬೇಕಾದರೂ ಅನಾಹುತವಾಗಬಹುದು. ಸಭಾನಾಯಕರಿದ್ದಾರೆ, ವಾಸ್ತವಿಕವಾದ ಸ್ಥಿತಿ ಏನು? ಸರ್ಕಾರವಿದೆಯೋ ಅಥವಾ ಇಲ್ಲವೋ ಎನ್ನತಕ್ಕ ಪರಿಸ್ಥಿತಿ ರಾಜ್ಯದ ಜನರಿಗೆ ತಿಳಿಯುವುದು ಬೇಡ. ಏನಾದರೂ ಸುದ್ದಿ ಇದ್ದರೆ ಸದನದ ಗಮನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅಗತ್ಯವಿರುವುದರಿಂದ ಕೇಳುತ್ತಿದ್ದೇವೆ.